ಕ್ಲಾಜು 114 ರಲ್ಲಿ A Settlement shall remain in force for a period of 30 years ಎಂದು ಮಾಡಿದ್ದಾರೆ. Original clause 115 ಅನ್ನು ತಿದ್ದುಪಡಿಮಾಡುತ್ತಾ, ಸೆಲೆಕ್ಟ್ ಕಮಿಟಿಯವರು, the State Government should not be empowered to reduce this period ಅಂತ ಹೇಳಿದ್ದಾರೆ. ಹಿಂದಿನ ಕ್ಲಾಜಿನಲ್ಲಿ ರಿಕನ್‌ಸಿಡರ್ ಮಾಡುವುದಕ್ಕೆ ಅವಕಾಶ ಇತ್ತು. ಈ ಅಪ್ಪಣೆ ಸರ್ವ ಕಾಲಕ್ಕೂ ಉಂಟು. ಇದು ಸರಿಯೇ? ಇದರ ವರ್ಡಿಂಗ್ ಸ್ವಲ್ಪ ಮಟ್ಟಿಗೆ ಹೀಗೆ ಹಾಕುವುದು ಸರಿಯಲ್ಲ. ಈಗ ಕಾನೂನುಗಳು ಬದಲಾವಣೆಯಾಗುತ್ತಿವೆ. Old order changeth yielding place to new. ಕಾನೂನು ಬದಲಾವಣೆಯಾಗುವುದು ಮಾತ್ರವಲ್ಲ. ಭೂಮಿಗೆ ಸಂಬಂಧಪಟ್ಟ ಹಾಗೂ ಎಷ್ಟೋ ಬದಲಾವಣೆಗಳಾಗುತ್ತವೆ, ಭೂಮಿಯಲ್ಲಿಯೂ ಅಭಿವೃದ್ಧಿ ಇರುತ್ತದೆ. ಈ ರೀತಿ ಸೆಟಲ್‌ಮೆಂಟ್ 30 ವರ್ಷ ಎಂದು ಕಟ್ಟಪ್ಪಣೆ ಮಾಡುವುದು ಸರಿಯೇ? ನ್ಯಾಯವೇ? ಕ್ಲಾಜ್ 116 ರನ್ನು ಸೆಲೆಕ್ಟ್ ಕಮಿಟಿಯವರು ತಿದ್ದುಪಡಿ ಮಾಡಿದ್ದಾರೆ. ಇದು ಸ್ವಲ್ಪ ತಪ್ಪೋ ಸರಿಯೋ ಗೊತ್ತಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀರ್ವೆ ಹೆಚ್ಚು ಇದೆ. ಅದರ ಮೇಲೆ ಸರ್ಚಾರ್ಜ್ ಹಾಕುತ್ತ ಅಸೆಸ್‌ಮೆಂಟನ್ನು ವಸೂಲ್ಮಾಡುತ್ತಿದ್ದಾರೆ. ಬಿಹಾರದಲ್ಲಿ ಇದು ರದ್ದಾಗಿದೆ, ಮಧ್ಯಪ್ರದೇಶದಲ್ಲಿ ರದ್ದಾಗಿದೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲು ಇದ್ದುದನ್ನು ದ್ವಿಗುಣ ಮಾಡಿದ್ದಾರೆ. ಒಂದು ವರ್ಷದ ಮಟ್ಟಿಗೆ ಈ ರೀತಿ ಮಾಡುತ್ತೇವೆ ಎಂದು ಹೇಳಿದವರು ಎರಡು ವರ್ಷಕ್ಕೆ ಮಾಡಿದ್ದಾರೆ. ಅದೇ ಹೊತ್ತಿಗೆ ಮಂಡ್ಯದಲ್ಲಿ ನೀರಾವರಿಯ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಅಲ್ಲಿ ತೀರ್ವೆ ಕಡಮೆ ಇದೆ. ಆ ಪ್ರದೇಶದಲ್ಲಿ ಬಹಳ ಅಭಿವೃದ್ಧಿ ಮಾಡಿದ್ದೀರಿ. ಈ ಸ್ಥಿತಿಯಲ್ಲಿ ಅಲ್ಲಿಯ ಜನರಿಗೆ ಮಾತ್ರ ಕಡಮೆ ತೀರ್ವೆ ಮುಂದುವರಿಯಬೇಕು ಎಂದು ಮಾಡುವುದಾದರೆ ಈ ರೆವಿನ್ಯೂ ಕೋಡ್ ಸರಿಯಾದುದಲ್ಲವೆಂದು ಹೇಳಬೇಕಾಗುತ್ತದೆ. ಮಂಡ್ಯದವರ ಮಟ್ಟಿಗೆ ಈ ವರ್ಷ ಅಸೆಸ್ ಮಾಡಿ ಆ ರೀತಿಯೇ ಮುಂದುವರಿಯಬೇಕು ಎನ್ನುವುದರಲ್ಲಿ ಅರ್ಥವಿದೆಯೇ? ಹೀಗೆ ನಾನು ಮಾತನಾಡುವಾಗ ಕಡಮೆ ಕೊಡುತ್ತಿರುವವರಿಗೆ ಏರಿಸಬೇಕು ಎಂದು ಹೇಳುವುದಿಲ್ಲ. ಶಾಲಾ ಬಾಲಕರ ಫೀ ಎಲ್ಲ ಕಡೆಯೂ ಒಂದೇ ರೀತಿ ಇರಬೇಕೆಂದು ಕೆಲವು ಕಡೆ ಹೆಚ್ಚು ಮಾಡಿ, ಫ್ರೀಷಿಪ್, ಸ್ಕಾಲರ್‌ಷಿಪ್ ಮುಂತಾದುವುಗಳನ್ನು ಕಡಮೆ ಮಾಡಿದಂತೆ ಇದರಲ್ಲಿಯೂ ಮಾಡಬೇಕೆಂದು ನಾನು ಹೇಳುತ್ತಿಲ್ಲ. ನಮ್ಮಲ್ಲಿ ಜಾಸ್ತಿ ಇರುವುದನ್ನೂ ಕಡಮೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಇಮ್ಮಡಿಯಾಗಿರುವುದನ್ನು ಕಡಮೆ ಇರುವವರ ಮಟ್ಟಕ್ಕೆ ತರುವುದು ಅಗತ್ಯವುಂಟು ಎಂದು ಹೇಳುತ್ತೇನೆ.

87 ನೆಯ ಕ್ಲಾಜಿನಲ್ಲಿ ಆರ್ಡಿನರಿ ಟೆನನ್ಸಿ ವಿಷಯ ಬರುವುದಿಲ್ಲ. ಭೂಮಿಯನ್ನು ಮಾರಿದಾಗ ಚಾಲು ಗೇಣಿ ಒಕ್ಕಲುಗಳು, ಇಂಥವರಿಗೆ ಏನಾಗುತ್ತದೆ ಎನ್ನುವುದು ಇದರಲ್ಲಿಲ್ಲ. ಇದನ್ನು ಕೂಡ ಇದರಲ್ಲಿ ತರುವುದು ಅಗತ್ಯವುಂಟು. ಏಕೆಂದರೆ ಇವತ್ತಿನ ಪ್ರಸಂಗದಲ್ಲಿ ಕೆಲವು ಕಡೆಗಳಲ್ಲಿ ಮನೆಗಳಿ

ರುತ್ತವೆ. ಅವು ಎನ್‌ಕ್ರೋಚ್ ಆಗಿರುವ ಸ್ಥಳಗಳಾಗಿರಬಹುದು. ಕೆಲವು ಕಡೆ ಅಲ್ಲಲ್ಲೇ ಖಾಯಂ ವಾಸಿಗಳಾಗಿ ಕೆಲವರು ಇದ್ದಾರೆ. ಇದರಲ್ಲಿ ಚಾಲುಗೇಣಿ ಒಕ್ಕಲು ಮನೆಗಳೂ ಬಂದಿರುತ್ತವೆ. ಈ ಕ್ಲಾಜ್ ಪ್ರಕಾರ ಜಮೀನಿನ ಹಕ್ಕು ಭೂಮಾಲೀಕನಿಗೆ ಹೋಗುತ್ತದೆ. ರೈತನಿಗೆ ಏನೂ ಬರುವುದಿಲ್ಲ. ಈ ಒಂದು ವಿಷಯದ ಮಟ್ಟಿಗೆ ಒಳ್ಳೆಯ ಪದ್ಧತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವುದನ್ನು ಈ ಕಾನೂನಿನಲ್ಲಿ ಸೇರಿಸಿ ಆ ಹಕ್ಕು ಯಾವ ರೀತಿ ಮುಂದುವರಿಯಬೇಕೆಂಬುದನ್ನು ನೋಡಿ ಸ್ಥಿರಪಡಿಸುವುದೂ ಅಗತ್ಯವುಂಟು.

ಇನ್ನು 79 ನೆಯ ಕ್ಲಾಜ್. ಕುಂಕಿ ಭೂಮಾಲೀಕರಿಗೆ ಉಳಿಯಬೇಕು ಎನ್ನುವುದು ಸರಿ. ಆದರೆ ಅದನ್ನು ಮಾರಲಿಕ್ಕೆ ಹಕ್ಕನ್ನು ಬಿಟ್ಟರೆ ನಾಲ್ಕು ಸಾವಿರ, ಹತ್ತು ಸಾವಿರ ರೂಪಾಯಿಗೆ ಮಾರಲಿಕ್ಕೆ ಸಾಧ್ಯವಿದೆ. ಕೆಲವರು ಗೇರುಬೀಜ ಬೆಳೆಯಲಿಕ್ಕೆ ಬೇಕು ಎಂದು ಭೂಮಿ ಪಡೆಯುತ್ತಾರೆ. ಮಲೆನಾಡು ಪ್ರದೇಶದಲ್ಲಿ ದೊಡ್ಡಮರಗಳು, ಒಳ್ಳೆಯ ಜಾತಿಯ ಮರಗಳು ಇರುತ್ತವೆ. ಈ ಮರಗಳನ್ನು ಕೆಲವು ಕಡೆ ಕಾಪಾಡಿಕೊಂಡು ಬರುತ್ತಿದ್ದಾರೆ. ಏಕೆಂದರೆ ಆ ಮರಗಳ ಸಹಿತ ಹಕ್ಕನ್ನು ಪಡೆದುಕೊಂಡರೆ ದೊಡ್ಡಸ್ವತ್ತು ಸಂಪಾದಿಸಬಹುದು ಎಂದು ಇಂಥ ಎಲ್ಲ ಮರಗಳ ಮೇಲಿನ ಹಕ್ಕೂ ಸರ್ಕಾರಕ್ಕೆ ಬರಬೇಕು ಎಂಬುದು ನನ್ನ ಅಭಿಪ್ರಾಯ.

ಕುಂಕಿಯಲ್ಲಿ ಒಕ್ಕಲು ಮನೆಗಳಿರುತ್ತವೆ. ಅಲ್ಲಿ ಕೆಲವು ಹರಿಜನರೂ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಎಷ್ಟೋ ಕಡೆ ಕುಂಕಿ ಸರ್ಕಾರದ ಸ್ಥಳ ನಮಗೆ ಅದು ಬರುತ್ತದೆ ಎಂದು ಹೇಳುವುದು ಹರಿಜನರಿಗೆ ಗೊತ್ತಿಲ್ಲ. ಹೀಗೆ ಒಕ್ಕಲುಗಳಾಗಿರುವವರು ಕುಂಕಿಯಲ್ಲಿ ಭೂಮಾಲೀಕರಿಗೆ ಚಾಲುಗೇಣಿ ಬರೆದು ಕೊಟ್ಟವರೂ ಇದ್ದಾರೆ. ನಾನು ಹೇಳುವುದು ಕುಂಕಿ ವರ್ಗದಾರನಿಗೆ ಕೊಡುವುದು ಬೇಡ' ಒಕ್ಕಲು ಮಾಡುವವನು ವಾಸವಾಗಿದ್ದರೆ, ಮರಗಳಿದ್ದರೆ, ಅದರ ಮಟ್ಟಿಗೆ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದು ಅಗತ್ಯವುಂಟು.

ಇನ್ನು ಕ್ಲಾಜು 83 ರನ್ನು ನೋಡುವಾಗ ನನಗೆ ಕಾಣುತ್ತದೆ, ಕಡಮೆ ಇದ್ದುದನ್ನು ಏರಿಸಕೂಡದು ಎಂಬ ಅಭಿಪ್ರಾಯವನ್ನು ಮೊದಲು ಬಿಲ್ಲಿನಲ್ಲಿ ಇದ್ದುದಕ್ಕಿಂತಲೂ ಪರಿಷ್ಕಾರವಾಗಿ ತಿದ್ದುಪಡಿಮಾಡಿ ಇದರಲ್ಲಿ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಸೆಲೆಕ್ಟ್ ಕಮಿಟಿಯವರು. ಶ್ರೀಯುತರುಗಳಾದ ಕಡಿದಾಳ್ ಮಂಜಪ್ಪನವರೂ, ಶಿವಪ್ಪನವರೂ ಇತರರೂ ಸೆಲೆಕ್ಟ್ ಕಮಿಟಿಯಲ್ಲಿದ್ದವರು ಎಲ್ಲಿ ಏನೋ ಒಂದು ಮಸಲತ್ತು ಮಾಡಿದ ಹಾಗೆ ಕಾಣುತ್ತದೆ, ಕಡಮೆ ಇದ್ದುದು ಹಾಗೆಯೇ ಉಳಿಯಬೇಕು ಎಂದು. ನಮ್ಮ ಊರಿನ ಹತ್ತಿರ ಒಂದು ಸ್ಥಳವುಂಟು. ಒಂದು ಎಕರೆ ಭೂಮಿ ಉಂಟು. ಮುಂಚೆ ಅದರಲ್ಲಿ 12 ಕುಡತ ಅಕ್ಕಿ ಸಿಕ್ಕುತ್ತಿತ್ತು. ಅದೇ ಒಂದು ಅಡಿಕೆ ತೋಟ ಮಾಡಿದರೆ ಎಕರೆ ಭೂಮಿಯಲ್ಲಿ ನಾಲ್ಕೈದು ಸಾವಿರ ರೂಪಾಯಿ ಸಿಕ್ಕುತ್ತದೆ. ಹೀಗಿರುವಾಗ ಕಡಮೆ ದರವನ್ನು ಹಾಕುವುದು ಸರಿ ಕಾಣುವುದಿಲ್ಲ. ಇದನ್ನು ಸ್ವಲ್ಪ ಸೂಕ್ಷ್ಮ ದೃಷ್ಟಿಯಿಂದ ನೋಡಬೇಕು. ಈ ರೀತಿ ಮಾಡುವುದರಲ್ಲಿ ವಿನಾಯತಿ ಕೊಡುವಾಗ್ಗೆ ಭೇದಭಾವ ಉಳಿಯಬಾರದು. ಒಂದು ಎಕರೆ ಅಡಕೆ ತೋಟದಲ್ಲಿ ನಾಲ್ಕೈದು ಸಾವಿರ ರೂಪಾಯಿ ಉತ್ಪತ್ತಿ ಬರುತ್ತದೆ. ಎಲ್ಲರಿಗೂ ಸಮನಾಗಿ ವಿನಾಯಿತಿ ಇರುವುದು ಏತಕ್ಕಾಗಿ ? ಸಮಾಜಕ್ಕೂ ಸ್ವತ್ತಿಗೂ ಪರಸ್ಪರ ಸಂಬಂಧ ಇದೆ. ಗಾಳಿ, ಬೆಳಕು, ನೀರು, ಭೂಮಿ ಇವು ದೇವರದ್ದು ಎಂದು ಪೂಜ್ಯ ವಿನೋಬಾಜಿಯವರು ಹೇಳಿದ್ದಾರೆ. ಆದುದರಿಂದ ಸಾಮಾನ್ಯ ವರ್ಗದವರ ಮೇಲೆ ಹೊರೆ ಬೀಳಬಾರದು. ಸಾಧಾರಣ ವರ್ಗದವರನ್ನು ಉಳಿಸಬೇಕು. ಒಂದೆರಡು ಎಕರೆ ಭೂಮಿ ಇಟ್ಟುಕೊಂಡು ಉಪಜೀವನ ಮಾಡತಕ್ಕ ಸಾಮಾನ್ಯ ಬಡ ರೈತನಿಗೆ 1,200 ರೂಪಾಯಿ ಉತ್ಪತ್ತಿ ಬರುವುದಿಲ್ಲ. ಆದರೆ ಅಂಥವರ ಮೇಲೆ ಸಹ ತೆರಿಗೆ ಬರುತ್ತದೆ. ಒಂದೇ ರೀತಿ ಹಾಕುವುದು ಸರಿಯಲ್ಲ. ಸಾಮಾನ್ಯ ಜನತೆಗೆ ಸೌಕರ್ಯ ಕಲ್ಪಿಸಿ ಕೊಡಬೇಕಾದುದು ಅಗತ್ಯ. ಮೊದಲು ಸಮಾಜ ನೋಡಿ ಭೂಮಿ ನೋಡಬೇಕು. ಆದರೆ ಭೂಮಿ ನೋಡಿ ಸಮಾಜ ನೋಡಬಾರದು. ಇದು ಮಸೂದೆಯಲ್ಲಿ ಸರಿಯಾಗಿ ಬರಲಿಲ್ಲ ಎಂದು ನನ್ನ ಅಭಿಪ್ರಾಯ.

5-00 P.M.

ಇನ್ನು ಡೆಪ್ಯುಟಿ ಕಮಿಷನರ್ ಮತ್ತು ಡಿವಿಜನಲ್ ಕಮಿಷನರ್ ಅವರಿಗೆ ಅಪೀಲ್ ಬಗ್ಗೆ ಸರಿಯಾದ ಅಧಿಕಾರ ಕೊಟ್ಟಿಲ್ಲ. ರೆವಿನ್ಯೂ ಇಲಾಖೆಯಲ್ಲಿ ಇವರು ಮುಖ್ಯ ಅಧಿಕಾರಿಗಳಿದ್ದಾರೆ. ಬೇರೆ ವಿಚಾರದಲ್ಲಿ ಅವರಿಗೆ ಹೆಚ್ಚಿನ ಅಧಿಕಾರ ಇದೆ. ಆದರೆ ರೆವಿನ್ಯೂ ಸಂಬಂಧದಲ್ಲಿ ಮಾತ್ರ ಅಧಿಕಾರ ಕಡಿಮೆ ಕೊಡಲಾಗಿದೆ. ಇದರ ಅರ್ಥವೇನು ?

ಇನ್ನು ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಎಲ್ಲಿಯೂ ನಮ್ಮ ಜಿಲ್ಲೆಯಲ್ಲಿ ಹುಲ್ಲುಗಾವಲು ಇಲ್ಲ. ನಮ್ಮ ಜಿಲ್ಲೆಗೆ ಇದು ಅತ್ಯಗತ್ಯವಾಗಿ ಬೇಕಾಗಿದೆ. ಹಳೇ ಮೈಸೂರಿನಲ್ಲಿ ಅನೇಕ ಕೆರೆಗಳು

(ಶ್ರೀ ಎ. ಕೃಷ್ಣಶೆಟ್ಟಿ)

ಇವೆ. ಕೆರೆಗಳ ನೀರು ತೆಗೆದುಕೊಂಡು ನೀರಾವರಿ ಮಾಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಅಷ್ಟೇ ಹಳ್ಳಗಳಲ್ಲಿ ನೀರು ಬರುತ್ತದೆ, ಈಗ ಹಳ್ಳಗಳು ಸಹ ಇಲ್ಲ. ಅಂಥ ಪ್ರದೇಶದಲ್ಲಿ ತೋಟಗಳು ಬಂದಿವೆ. ದನಗಳಿಗೆ ಸಾಕಷ್ಟು ಹುಲ್ಲು ದೊರೆಯುವುದಿಲ್ಲ. ಆದುದರಿಂದ ನಮ್ಮ ಜಿಲ್ಲೆಯಲ್ಲಿ ಹುಲ್ಲುಗಾವಲು ಮಾಡುವುದು ಅತ್ಯಗತ್ಯವಾಗಿದೆ. ಇದಕ್ಕೆ ಗಮನ ಕೊಡಬೇಕೆಂದು ಸೂಚನೆ ಮಾಡುತ್ತೇನೆ.

ಅನೇಕ ಕಡೆ ನಮ್ಮ ಜಿಲ್ಲೆಯಲ್ಲಿ ರೈತರಿಗೂ ಭೂಮಾಲೀಕರಿಗೂ ತಕರಾರು ಬಂದು ಮೊಕದ್ದಮೆ ಹಾಕಿದ್ದಾರೆ. ಕೆಲವು ಕಡೆ ಕೊಲೆ ಆಗಿವೆ. ಸಾಧಾರಣವಾಗಿ ಬಡರೈತರಿಗೆ ಇಂಥ ಕಾನೂನಿನಿಂದ ಅನುಕೂಲವಾಗುವುದಿಲ್ಲ. ಬಡ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ರೂಲ್ಸ್ ಫ್ರೇಮ್ ಮಾಡಬೇಕೆಂದು ಸೂಚಿಸುತ್ತೇನೆ. ಈ ದೃಷ್ಟಿಯಿಂದ ಕೆಲಸ ಮಾಡದೇ ಇದ್ದರೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ದೊಡ್ಡ ದೊಡ್ಡ ಭೂಮಾಲೀಕರು ಭೂಮಿ ಪಡೆದು ಲಾಭ ಅವರೇ ತೆಗೆದುಕೊಳ್ಳುತ್ತಾರೆ. ಸಾಮಾನ್ಯ ಜನರಿಗೆ ಅನುಕೂಲವಾಗುವುದಿಲ್ಲ. ಇದನ್ನು ತಪ್ಪಿಸಬೇಕು. ಇದನ್ನು ಅಗತ್ಯವಾಗಿ ಪರಿಶೀಲಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಅಧ್ಯಕ್ಷರೇ, ಈ ವಿಧೇಯಕದಲ್ಲಿ ಈಗ ಇಲ್ಲದೇ ಇರತಕ್ಕ ಹೊಸ ವಿಷಯಗಳನ್ನು ಏನೂ ಅಡಕ ಮಾಡಿಲ್ಲ. ಈಗ ಮೈಸೂರು ರಾಜ್ಯದ ಐದು ಪ್ರದೇಶಗಳಲ್ಲಿ ಐದು ವಿಧವಾದ ಕಾನೂನುಗಳು ಜಾರಿಯಲ್ಲಿರುವ ಈ ಐದು ವಿಧವಾದ ಕಾನೂನುಗಳನ್ನು ಸಮನ್ವಯಗೊಳಿಸುವ ಸಲುವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ. ಈ ವಿಧೇಯಕದಲ್ಲಿ ಭೂಮಿ ಮತ್ತು ಕಂದಾಯದ ವಿಚಾರದಲ್ಲಿ ಸರ್ಕಾರದ ಮತ್ತು ಸಾರ್ವಜನಿಕರ ಹಕ್ಕುಬಾಧ್ಯತೆಗಳನ್ನು ನಿಗದಿ ಮಾಡಲಾಗಿದೆ. ಸರ್ಕಾರದ ಹಕ್ಕು ಭೂಮಿಯಮೇಲೆ ಎಷ್ಟಿದೆ ಹಿಡುವಳಿದಾರನಿಗೆ ತನ್ನ ಭೂಮಿಯಮೇಲೆ ಎಷ್ಟು ಹಕ್ಕು ಇದೆ ಆತನ ಜವಾಬ್ದಾರಿ ಏನು ವಗೈರೆಗಳನ್ನು ಈ ವಿಧೇಯಕದಲ್ಲಿ ಅಡಕ ಮಾಡಲಾಗಿದೆ. ಶ್ರೀಮಾನ್ ಕೃಷ್ಣ ಶೆಟ್ಟರು ಮತ್ತು ಕದಂ ಅವರು ಕೆಲವು ವಿಚಾರಗಳಲ್ಲಿ ಈ ವಿಧೇಯಕವನ್ನು ಟೀಕೆ ಮಾಡಿದ್ದಾರೆ. ನನಗಾದರೂ ಟೀಕೆ ಮಾಡುವಷ್ಟು ಅವಕಾಶ ಈ ವಿಧೇಯಕದಲ್ಲಿ ಇಲ್ಲವಲ್ಲಾ ಎಂದು ಅನಿಸುತ್ತದೆ. ಸ್ಪೆಷಲ್ ಡೆಪ್ಯುಟಿ ಕಮೀಷನರು ಮತ್ತು ತಹಸೀಲ್‌ದಾರರು ಇರಬಾರದು ಅವರ ನೇಮಕಕ್ಕೆ ಅವಕಾಶ ಕಲ್ಪಿಸುವುದು ಸೂಕ್ತವಲ್ಲ ಎಂದು ಅವರು ಹೇಳಿದರು. ಮಾನ್ಯ ಸದಸ್ಯರಿಗೆ ಅನೇಕರಿಗೆ ಗೊತ್ತಿರುವಂತೆ ಕೆಲವು ಸಂದರ್ಭಗಳಲ್ಲಿ ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಬೇಕಾಗುತ್ತದೆ. ಉದಾಹರಣೆ ಹೇಳುವುದಾದರೆ ಇನಾಂ ರದ್ದಿಯಾತಿ ಕಾನೂನನ್ನು ಜಾರಿಗೆ ಕೊಡುವಾಗ ಮತ್ತು ಮುಳುಗಡೆ ಪ್ರಯುಕ್ತ ಜಮೀನುಗಳನ್ನು ಕಳೆದುಕೊಂಡ ರೈತರಿಗೆ ಪರಿಹಾರಗಳನ್ನು ನೀಡತಕ್ಕ ಸಂದರ್ಭಗಳಲ್ಲಿ ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಬೇಕಾಗುತ್ತದೆ. ಆ ವಿಶೇಷ ಅಧಿಕಾರಿಗಳಿಗೆ ಡೆಪ್ಯುಟಿ ಕಮೀಷನರೋ ಅಥವಾ ತಹಸೀಲ್ದಾರರೋ ಅವರಿಗೆ ಅಧಿಕಾರವನ್ನು ಕೊಡುವುದಕ್ಕೂ ಕೂಡ ಅವಕಾಶ ಇರುತ್ತದೆ. ಆ ವಿಶೇಷ ಅಧಿಕಾರಿಗಳನ್ನು ನೇಮಕ ಮಾಡುವುದಕ್ಕೆ ಈ ವಿಧೇಯಕದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಮತ್ತು 30 ವರ್ಷಗಳ ಅವಧಿ ಸೆಟ್ಲ್‌ಮೆಂಟ್‌ಗೆ ಇರಬಾರದು, ಅದು ಬಹಳ ದೀರ್ಘವಾಯಿತು ಎಂದು ಶ್ರೀಮಾನ್ ಕೃಷ್ಣ ಶೆಟ್ಟರು ಹೇಳಿದರು. ರೈತರ ಹಿತದೃಷ್ಟಿಯಿಂದ 30 ವರ್ಷಗಳ ಅವಧಿಯನ್ನು ಇಡಬೇಕಾಗುತ್ತದೆ. ಪದೇ ಪದೇ ಕಂದಾಯವನ್ನು ಹೆಚ್ಚು ಮಾಡುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ ಎಂಬ ದೃಷ್ಟಿಯಿಂದ 30 ವರ್ಷದ ಮಿತಿಯನ್ನು ಗೊತ್ತು ಮಾಡಲಾಗಿದೆ. ಮತ್ತು ಇನ್ನು ಕೆಲವು ಉಪಯುಕ್ತವಾದ ನಿಬಂಧನೆಗಳನ್ನು ಈ ವಿಧೇಯಕದಲ್ಲಿ ಅಡಕ ಮಾಡಿದ್ದೇವೆ. ಶ್ರೀಮಾನ್ ಕದಂ ಅವರು ಅಪ್ಪಣೆ ಕೊಡಿಸಿದ ಹಾಗೆ ಕೋರ್ಟು ವ್ಯವಹಾರಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಅಪೀಲುಗಳನ್ನು ಕಡಿಮೆ ಮಾಡಿದ್ದೇವೆ. ಜೊತೆಗೆ ಕಂದಾಯ ಮಂತ್ರಿ ಬಾಡಿಗೆ ಹರಾಜು ಆದಾಗ ರೈತ ಆ ಹರಾಜನ್ನು ರದ್ದುಪಡಿಸುವುದಕ್ಕೆ ಅರ್ಜಿ ಹಾಕುವಾಗ ಮೊದಲನ ನಿಬಂಧನೆಯ ಪ್ರಕಾರ ಕೇವಲ 30 ದಿನಗಳ ಅವಧಿಯನ್ನು ಗೊತ್ತು ಮಾಡಲಾಗಿತ್ತು ಈಗ 90 ದಿನಗಳ ಅವಧಿಯನ್ನು ಗೊತ್ತುಮಾಡಲಾಗಿದೆ ಮತ್ತು ರೆವಿನ್ಯೂ ಮಂತ್ರಿಗಳು ಈಗಾಗಲೇ ಅಪ್ಪಣೆ ಕೊಡಿಸಿರುವ ಹಾಗೆ ಕಂದಾಯವನ್ನು ಸಸ್‌ಪೆಂಡ್ ಮಾಡುವುದಕ್ಕೆ ಮತ್ತು ವಜಾ ಮಾಡುವುದಕ್ಕೆ ರೆವಿನ್ಯೂ ಕಾನೂನಿನಲ್ಲಿ ನಿಬಂಧನೆಗಳು ಇರಲಿಲ್ಲ ಈಗ ಆ ನಿಬಂಧನೆಗಳನ್ನು ಅಡಕ ಮಾಡಿದ್ದೇವೆ. ವಿಲೇಜ್ ಅಕೌಂಟೆಂಟ್ ಅಥವಾ ಶ್ಯಾನುಭೋಗರಿಗೆ ಬದಲಾಗಿ ಗ್ರಾಮಾಧಿಕಾರಿಗಳನ್ನು ನೇಮಕ ಮಾಡುವುದಕ್ಕೂ ಅವಕಾಶ ಕಲ್ಪಿಸಲಾಗಿದೆ. ಆ ಗ್ರಾಮಾಧಿಕಾರಿಗಳು ಲೆಕ್ಕಪತ್ರಗಳನ್ನು ಇಡತಕ್ಕದ್ದು ಎಂದು ಈ ವಿಧೇಯಕದಲ್ಲಿ ವಿಧಾಯಕ ಮಾಡಿದ್ದೇವೆ ಗ್ರಾಮಾಧಿಕಾರಿಗಳು ಲೆಕ್ಕವನ್ನು ಇಟ್ಟುಕೊಳ್ಳುವುದು ಸೂಕ್ತವಲ್ಲ ಎಂದು ಕೆಲವರು

ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ವಂಶಪಾರಂಪರ್ಯವಾದ ಹಕ್ಕು ವಜಾ ಆದ ಮೇಲೆ ಸರ್ಕಾರಿ ನೌಕರರು ಗ್ರಾಮಾಧಿಕಾರಿಗಳಾಗಿ ನೇಮಕ ಮಾಡಲ್ಪಡುವುದರಿಂದ ರೈತರ ಹಿತ ದೃಷ್ಟಿಯಿಂದ ಲೆಕ್ಕಗಳನ್ನು ಗ್ರಾಮಗಳಲ್ಲಿ ಇಟ್ಟುಕೊಳ್ಳತಕ್ಕದ್ದು ಬಹಳ ಅವಶ್ಯಕ ಮತ್ತು ಸೂಕ್ತ. ರೈತರಿಗೆ ಬೇಕಾದ ದಾಖಲೆಗಳು ಗ್ರಾಮಾಧಿಕಾರಿಯ ಹತ್ತಿರ ಸಿಕ್ಕುವುದರಿಂದ ಗ್ರಾಮದಲ್ಲಿ ಲೆಕ್ಕ ಇಡುವುದರಿಂದ ತೊಂದರೆಯಾಗುವುದಿಲ್ಲ ಎಂದು ನನ್ನ ಭಾವನೆ. ಮುಖ್ಯವಾಗಿ ಎರಡು ಮೂರು ಆಕ್ಷೇಪಣೆಗಳು ಹಿಂದೆ ಈ ವಿಧೇಯಕ ಚರ್ಚೆಗೆ ಬಂದಿದ್ದಾಗ್ಗೆ ವ್ಯಕ್ತಮಾಡಲ್ಪಟ್ಟಿದ್ದವು, ಅಸಿಸ್ಟೆಂಟ್ ಕಮಿಷನರ ಹುದ್ದೆ ಇರಬಾರದು ಅನಾವಶ್ಯಕ ಎಂದು ಹೇಳಿದ್ದರು. ನನ್ನ 9 ವರ್ಷದ ಆಡಳಿತದ ಅನುಭವದಿಂದ ಹೇಳುವುದಾದರೆ ಅಸಿಸ್ಟೆಂಟ್ ಕಮಿಷನರ ಹುದ್ದೆ ಬಹಳ ಅವಶ್ಯಕವಾಗಿದೆ. ಅಸಿಸ್ಟೆಂಟ್ ಕಮಿಷನರಿಗೆ ಕೆಲವು ''ಒರಿಜಿನಲ್ ವರ್ಕ್'' ಎಂದು ಏನು ಹೇಳುತ್ತಾರೆ, ಅದು ಬಹಳವಾಗಿ ಇರುವುದರಿಂದ ಅವರ ಹುದ್ದೆ ಬಹಳ ಅವಶ್ಯಕವಾಗಿದೆ. ಇನ್ನು ಎರಡನೆಯ ಆಕ್ಷೇಪಣೆ ಎಂದರೆ ಡಿವಿಜನಲ್ ಕಮಿಷನರ ಹುದ್ದೆ ಬೇಡ ಎಂದು ಹೇಳಿ ಕೆಲವರು ಹೇಳುತ್ತಾ ಇದ್ದರು ಇದು ವಿವಾದಾಸ್ಪದವಾದ ವಿಚಾರ. ಕೆಲವು ಕಡೆಗಳಲ್ಲಿ ಕೆಲವು ರಾಜ್ಯಗಳಲ್ಲಿ ಡಿವಿಜನಲ್ ಕಮಿಷನರ ಹುದ್ದೆ ಇದ್ದಾಗ ಅದು ಅನಾವಶ್ಯಕ ಅದರ ಬದಲು ರೆವಿನ್ಯೂ ಬೋರ್ಡ್ ಸ್ಥಾಪನೆ ಮಾಡಬೇಕೆಂಬ ಇಚ್ಛೆಯಿಂದ ಡಿವಿಜನ್‌ಗಳನ್ನು ವಜಾಮಾಡಿ ಅದರ ಬದಲು ಬೇರೆ ವ್ಯವಸ್ಥೆಯನ್ನು ಜಾರಿಗೆ ತಂದದ್ದು ಉಂಟು. ಸಾಧಕ ಬಾಧಕಗಳು ಎರಡೂ ಇವೆ. ನಾನು ವೈಯುಕ್ತಿಕವಾಗಿ ಡಿವಿಜನಲ್ ಕಮಿಷನರು ಬೇಡ ಎಂದು 1956ರಲ್ಲಿ ಅಭಿಪ್ರಾಯ ಪಟ್ಟಿದ್ದೆ. ಈ ರಾಜ್ಯದಲ್ಲಿ ವಿವಿಧ ಭಾಗದ ಜನರು ರಾಜ್ಯದ ರಾಜಧಾನಿಗೆ ಅಥವಾ ಬೆಂಗಳೂರು ನಗರಕ್ಕೆ ಬರಬೇಕೆಂದರೆ ತೊಂದರೆಯಾಗುತ್ತದೆ ಆ ದೃಷ್ಟಿಯಿಂದ ಅಲ್ಲಲ್ಲಿ ಡಿವಿಜನಲ್ ಕಮಿಷನರುಗಳು ಇರತಕ್ಕದ್ದು ಅವಶ್ಯಕ ಎಂಬ ಅಭಿಪ್ರಾಯವೂ ಕೂಡ ಇದೆ. ಅದೂ ಅಲ್ಲದೆ ಒಂದು ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ, ಕೇವಲ ಕೆಲವು ವರ್ಷಗಳ ಹಿಂದೆ. ಈ ವ್ಯವಸ್ಥೆಯನ್ನು ಬಹಳ ಬೇಗ ಬದಲಾವಣೆ ಮಾಡುವುದು ಸೂಕ್ತವಲ್ಲ ಎಂದು ಅನಿಸುತ್ತದೆ. ಡಿವಿಜನಲ್ ಕಮಿಷನರ ಹುದ್ದೆ ವಜಾ ಮಾಡಿದರೆ ಅವರಿಗೆ ಬದಲಾಗಿ ರೆವಿನ್ಯೂ ಬೋರ್ಡನ್ನು ನೇಮಕ ಮಾಡಬೇಕಾಗುತ್ತದೆ.

ಈ ರೆವಿನ್ಯೂ ಬೋರ್ಡನ್ನು ನೇಮಕ ಮಾಡಿದರೆ ಅದರಿಂದ ಹೆಚ್ಚಿನ ಉಳಿತಾಯವೇನೂ ಆಗುವುದಿಲ್ಲ. ಜೊತೆಗೆ ಈಗಿರತಕ್ಕ ರೆವಿನ್ಯೂ ಬೋರ್ಡ್ ಆದರೆ ಸರ್ಕಾರದ ಇನ್‌ಫ್ಲುಯೆನ್ಸಿಗೆ ಒಳಗಾಗುವುದಕ್ಕೆ ಒಂದು ಅವಕಾಶ ಇರುತ್ತದೆಂದು ಹೇಳಲು ದಾರಿ ಇತ್ತು. ಈ ಒಂದು ದೃಷ್ಟಿಯಿಂದ ಕೂಡ ಅದು ಯಾರ ಇನ್‌ಫ್ಲುಯೆನ್ಸಿಗೂ ಒಳಗಾಗಬಾರದೆಂಬ ಉದ್ದೇಶದಿಂದ ರೆವೆನ್ಯೂ ಅಪ್ಪೆಲ್ಲೇಟ್ ಟ್ರಿಬ್ಯೂನಲ್ ರಚನೆ ಮಾಡಲಾಗಿದೆ. ಇದರಲ್ಲಿ ರೆವೆನ್ಯೂ ಅಧಿಕಾರಿಗಳಿದ್ದಾರೆ. ಡಿಸ್ಟ್ರಿಕ್ಟ್ ಜಡ್ಜ್ ರ್‍ಯಾಂಕಿನ ನ್ಯಾಯಾಂಗದ ಅಧಿಕಾರಿಗಳಿದ್ದಾರೆ. ಈ ಟ್ರಿಬ್ಯುನಿನಲ್ಲೂ ಹೈಕೋರ್ಟಿನಂತೆ ನಿರ್ಭಯವಾಗಿ ಕೆಲಸ ಮಾಡಲು ಒಂದು ಅವಕಾಶವನ್ನು ಕಲ್ಪಿಸಲಾಗಿದೆ. ಆದುದರಿಂದ ಈ ರೆವೆನ್ಯೂ ಅಪೆಲ್ಲೇಟ್ ಟ್ರಿಬ್ಯುನಲ್‌ನಿಂದ ಯಾರೂ ಘಾಬರಿ ಆಗಬೇಕಾಗಿಲ್ಲ. ಕೆಲವರು ಕೋಡು ಎಂದು ಕರೆಯುವುದಕ್ಕೆ ಬದಲಾಗಿ ಆಕ್ಟ್ ಎಂತ ಕರೆದಿದ್ದಾರೆಂದು ಟೀಕೆ ಮಾಡಿದರು. ಆದರೆ ಇದರಲ್ಲಿ ಅಂಥಾ ವ್ಯತ್ಯಾಸವೇನೂ ಆಗುವುದಿಲ್ಲ. ಈ ಎರಡರ ಅರ್ಥವೂ ಒಂದೇ. ಈ ಪದಗಳ ವ್ಯತ್ಯಾಸದಿಂದ ಯಾರ ಹಕ್ಕು ಬಾಧ್ಯತೆಗಳೂ ಹೆಚ್ಚು ಕಡಮೆಯಾಗುವುದಿಲ್ಲ. ಆದ್ದರಿಂದ ಈ ಬಿಲ್ಲಿನ ಬಗ್ಗೆ ದೀರ್ಘವಾದ ಟೀಕೆ ಘರ್ಷಣೆಗಳಿಗೆ ಅವಕಾಶವಿಲ್ಲ. ಇದು ಕಾನೂನಿನ ಸಮನ್ವಯಕ್ಕಾಗಿ ತಂದಂಥ ಮಸೂದೆಯಾಗಿದೆ. ಇದರಲ್ಲಿ ರೈತರಿಗೆ ಕಿರುಕುಳವನ್ನುಂಟುಮಾಡತಕ್ಕ ಯಾವ ಕ್ಲಾಜನ್ನೂ ಹಾಕಿಲ್ಲ. ಇದನ್ನು ಈ ಮಾನ್ಯ ಸಭೆಯವರು ಒಪ್ಪಿಕೊಳ್ಳಬಹುದೆಂದು ಹೇಳುತ್ತೇನೆ.

[MR. DEPUTY SPEAKER in the Chair.]

† ಶ್ರೀ ಎಚ್. ಆರ್. ಕೇಶವ ಮೂರ್ತಿ (ಗಂಡಸಿ).—ಸ್ವಾಮಿ, ಈ ಲ್ಯಾಂಡ್ ರೆವಿನ್ಯೂ ಕೋಡು ಹೆಸರಿನಲ್ಲಿ ಬಿಲ್ಲೆಂತ ಇದನ್ನು ಕರೆಯಲಾಗಿದ್ದರೂ ಇದು ರೈತರಿಗೊಂದು ಬಾಣವಾಗೇ ಇದೆ. ಈ ಮಸೂದೆ ನಿಜವಾಗಿಯೂ ರೈತರಿಗೆ ಬಹಳ ಕಷ್ಟವನ್ನು ಉಂಟುಮಾಡುವಂಥ ಬಿಲ್ಲಾಗಿದೆ. ಇದರಲ್ಲಿ ಒಂದು ಮಹತ್ವದ ಬದಲಾವಣೆ ಏನಾಗಿದೆಯೆಂದರೆ : ದೇಶದಲ್ಲಿರತಕ್ಕ ಸರ್ವರ ಹಿತದೃಷ್ಟಿಯನ್ನೂ ಒಂದೇ ಸಮನಾಗಿ ನೋಡಿಕೊಂಡು ಬರುತ್ತಿದ್ದಂಥ ವಂಶಾನುಗತವಾಗಿ ಬಂದಿದ್ದ ಗ್ರಾಮಾಧಿಕಾರಿಗಳನ್ನು ಇದರಲ್ಲಿ ರದ್ದುಮಾಡಲಾಗಿದೆ. ಈ ಗ್ರಾಮಾಧಿಕಾರಿಗಳಿಂದ ಗ್ರಾಮದ ಮಟ್ಟದಲ್ಲಿ ಗ್ರಾಮಗಳ ಆಡಳಿತವು ಅತಿ ಕಡಮೆ ವೆಚ್ಚದಲ್ಲಿ ನಡೆದುಕೊಂಡು ಬರುತ್ತಿತ್ತು. ಆದರೆ ಇಂಥ ಒಂದು ಪದ್ಧತಿಯನ್ನು ರಾಷ್ಟ್ರದ ಪ್ರಗತಿಗಾಗಿ ರದ್ದುಗೊಳಿಸಲಾಗಿದೆ. ಆದರೆ ಈ ಜನರ ಸ್ಥಾನದಲ್ಲಿ ಸರ್ಕಾರದವರು ಹೆಚ್ಚಿನ ಖರ್ಚು ವೆಚ್ಚಗಳಿಲ್ಲದಂತೆ ಆ ಕೆಲಸ ಕಾರ್ಯಗಳನ್ನು ನಡೆಸಬೇಕಾದ್ದು ಅವರ ಕರ್ತವ್ಯ. ಸರ್ಕಾರದವರೂ ಸಹಾ ಹೀಗೆ ಮಾಡುತ್ತಾರೆಂದು ನಾವು ನಂಬಿಕೊಂಡಿದ್ದೆವು. ಆದರೆ ನಮ್ಮ ಆಸೆ

(ಶ್ರೀ ಎಚ್. ಆರ್. ಕೇಶವಮೂರ್ತಿ)

ನಿರಾಸೆಯಾಗಿದೆ. ಈದಿವಸ ಗ್ರಾಮದಲ್ಲಿ ಚುನಾವಣೆಯಿಂದ ಆರಿಸಿ ಬರತಕ್ಕ ವ್ಯಕ್ತಿ ಛೇರ್ಮನ್ ಆಗಿ ಗ್ರಾಮದ ಆಡಳಿತದಲ್ಲಿ ಆತನು ಮುಖ್ಯಸ್ಥನಾಗುತ್ತಾನೆ. ಇನ್ನು ಈ ವಿಲೇಜ್ ಅಕೌಂಟೆಂಟ್ ಯಾವತ್ತೂ ಆ ಛೇರ್ಮನ್ನರ ಆಜ್ಞೆಯಂತೆ ನಡೆಯಬೇಕಾಗಿರುತ್ತದೆ. ಈ ಛೇರ್ಮನ್ ಪೊಲಿಟಿಕಲ್ ಮ್ಯಾಗ್ನೆಟ್ ಆದರೆ, ವಿಲೇಜ್ ಅಕೌಂಟೆಂಟ್ ಐರನ್ ಫೈಲಿಂಗ್ ಎಂತ ಹೇಳಬಹುದು. ಇನ್ನು ಮುಂದ ಕ್ಕೆಲ್ಲಾ ಈ ವಿಲೇಜ್ ಪಂಚಾಯಿತಿ ಮತ್ತು ತಾಲ್ಲೂಕುಗಳ ಛೇರ್ಮನ್ನುಗಳು ಪೊಲಿಟಿಕಲ್ ಮ್ಯಾಗ್ನೆಟ್ಟಾಗಿರುವುದರಿಂದ ಈ ಅಕೌಂಟೆಂಟುಗಳು ಜನಹಿತಸಾಧನೆಗೆ ಕೆಲಸಮಾಡಲು ಸಾಧ್ಯವಿಲ್ಲ. ಹಿಂದೆ ಇದ್ದ ಪದ್ಧತಿಯಲ್ಲಿ ಇಂಥ ಯಾವ ಒಂದು ದಾಕ್ಷಿಣ್ಯಕ್ಕೂ ಒಳಗಾಗದೇ ಜನರ ಹಿತವನ್ನು ಸಾಧಿಸಲು ಅವಕಾಶವಿತ್ತು. ಈಗ ಆ ರೀತಿ ಮಾಡಲು ಅವಕಾಶವಿಲ್ಲ. ಇದರಿಂದ ಕೆಲವು ಕಡೆಗಳಲ್ಲಿ ತೊಂದರೆಗಳಾಗಬಹುದು. ಆದರೆ ಈ ದಿವಸ ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ನಿಷ್ಪಕ್ಷಪಾತದಿಂದ ಕೆಲಸ ಕಾರ್ಯಗಳು ನಡೆಯುತ್ತಿಲ್ಲವೇ ಎಂದು ಕೇಳಬಹುದು. ಆದರೆ ಗ್ರಾಮಗಳಲ್ಲಿ ಆ ರೀತಿ ಆಡಳಿತ ನಡೆಸುವುದಕ್ಕೆ ಖಂಡಿತಾ ಸಾಧ್ಯವಿಲ್ಲ. ಇಲ್ಲಿರತಕ್ಕ ಸೆಕ್ರೆಟರಿಗಳು ಒಂದು ಇನ್‌ಫ್ಲುಯೆನ್ಸಿಗೆ ಒಳಗಾಗಲೇ ಬೇಕಾಗುತ್ತದೆ. ಇವರು ಹಾಗೆ ಯಾರೊಬ್ಬರ ದಾಕ್ಷಿಣ್ಯಕ್ಕೂ ಒಳಗಾಗದಂತೆ ಕೆಲಸಕಾರ್ಯಗಳು ನಡೆಯಬೇಕಾಗಿದ್ದರೆ ಇವರನ್ನು ನೇರವಾಗಿ ಜಿಲ್ಲಾಧಿಕಾರಿಗಳ ಆಡಳಿತಕ್ಕೊಳಪಡಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಈ ಬಗ್ಗೆ ನನ್ನ ಗಮನಕ್ಕೆ ಬಂದ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇನ್ನೂ ಮೊನ್ನೆ ತಾನೇ ನಾನು ತುರುವೇಕೆರೆಗೆ ಚುನಾವಣಾ ಪ್ರಚಾರಕ್ಕಾಗಿ ಹೋಗಿದ್ದೆನು. ಅಲ್ಲಿ ಒಬ್ಬ ವಿಲೇಜ್ ಅಕೌಂಟೆಂಟು ಐಡೆಂಟಿಫಿಕೇಷನ್ ಸ್ಲಿಪ್ಪುಗಳನ್ನು ಬರೆದುಕೊಡುತ್ತಿದ್ದ. ಆದರೆ ಆತನು ಅಷ್ಟೇ ಕೆಲಸಮಾಡದೇ ಛೇರ್ಮನ್ನರ ಇನ್‌ಫ್ಲುಯೆನ್ಸಿಗೊಳಗಾಗಿ ಜನರ ಕೈಗೆ ಆ ಐಡೆಂಟಿಫಿಕೇಷನ್ ಸ್ಲಿಪ್ಪನ್ನು ಕೊಟ್ಟಕೂಡಲೇ ಜೋಡೆತ್ತಿನ ಗುರ್ತಿಗೆ ನಿಮ್ಮ ಓಟುಗಳನ್ನು ಹಾಕಬೇಕೆಂದು ಹೇಳಿ ಕಳುಹಿಸುತ್ತಿದ್ದ. ನಾನು ಆತನನ್ನು ನೀವು ಹೀಗೆ ಮಾಡಬಹುದೇ ಎಂದು ಕೇಳಿದಕ್ಕೆ ಆತನು ತನ್ನ ತಪ್ಪನ್ನು ಒಪ್ಪಿಕೊಂಡನು. ಆದರೆ ಆತ ಮುಂದುವರಿದು, ಸ್ವಾಮಿ ನೀವು ಕೇಳಿದ್ದೇನೋ ಸರಿಯೇ ಆದರೆ ನಾನು ಹಾಗೆ ನಡೆದರೆ ನಮ್ಮ ಛೇರ್ಮನ್ನರು ನನ್ನನ್ನು ಒಂದೇ ದಿನದಲ್ಲಿ ಊರನ್ನು ಬಿಟ್ಟು ಓಡಿಸಿ ಬಿಡುತ್ತಾನೆ ಎಂದು ಆತ ಹೇಳಿದ.

ಪಾಪ, ಇಂಥ ಸನ್ನಿವೇಶದಲ್ಲಿ ಸಿಕ್ಕಿ ಹಾಕಿಕೊಂಡು ಒಂದು ನಿಷ್ಪಕ್ಷಪಾತವಾದ, ಒಂದು ಶಾಂತಿಯುತವಾದ ಆಡಳಿತ ನಡೆಸುವುದಕ್ಕೆ ಸಾಧ್ಯವೆ! ನಮ್ಮ ರೆವಿನ್ಯೂ ಸಚಿವರು ಆಳುವ ಪಕ್ಷದವರಾಗಿದ್ದರೂ ಕೂಡ ಅವರಲ್ಲಿ ಒಂದು ವಿಶಾಲಭಾವನೆ ಉಳ್ಳವರಾದ್ದರಿಂದ ಹೇಳುತ್ತಿದ್ದೇನೆ. ಖಂಡಿತವಾಗಿ ಇವರನ್ನು ವಿಲೇಜ್ ಪಂಚಾಯಿತಿ ಚೇರ್ಮನ್‌ರ ಆಡಳಿತದ ಕೈಕೆಳಗೆ ಬಿಡಬಾರದು. ಇವರು ಡೆಪ್ಯುಟಿ ಕಮಿಷನರ ಡೈರೆಕ್ಟ್ ಕಂಟ್ರೋಲ್ ಒಳಗಿರಬೇಕು. ಈ ವಿಲೇಜ್ ಅಕೌಂಟೆಂಟುಗಳು ಚೇರ್ಮನ್ನರ ಪೊಲಿಟಿಕಲ್ ಇನ್‌ಫ್ಲುಯೆನ್ಸಿಗೆ ಒಳಗಾಗಕೂಡದು, ಅಂಥ ಸ್ಥಾನಮಾನವನ್ನು ಅವರಿಗೆ ಕಲ್ಪಿಸಿಕೊಡಬೇಕಾದ್ದು ತಮ್ಮ ಆದ್ಯ ಕರ್ತವ್ಯ.

5-30 P.M.

ಈ ವಿಲೇಜ್ ಅಕೌಂಟೆಂಟುಗಳಿಗೆ ರೆವಿನ್ಯೂ ಮ್ಯಾಟರ್ಸ್ ಅಲ್ಲದೆ, ಮಹಜರ್ ಬರೆಯುವ ಡಿಪೊಸಿಷನ್ ತೆಗೆದುಕೊಳ್ಳುವ ದೊಡ್ಡ ದೊಡ್ಡ ಅಧಿಕಾರ ಕೊಟ್ಟಿದ್ದೀರಿ. ವಿಲೇಜ್ ಅಕೌಂಟೆಂಟ್ ಅಂದರೆ ಸಾಮಾನ್ಯವಾಗಿ 4–6 ಹಳ್ಳಿಗಳಿಗೆ ಒಬ್ಬ ಅಕೌಂಟೆಂಟ್ ಇರುತ್ತಾನೆ. ಅವನ ವಿದ್ಯಾರ್ಜನೆ ಅವನ ವ್ಯವಹಾರ ದಕ್ಷತೆ ನೋಡಿದರೆ, ಅವನು ಮಹಜರ್ ಡ್ರಾ ಮಾಡತಕ್ಕಂಥ ಜವಾಬ್ದಾರಿಯುತವಾದ ಕೆಲಸಕ್ಕೆ ಅರ್ಹನೇ ಮತ್ತು ಅವನಿಗೆ ಆ ಕೆಲಸವನ್ನು ವಹಿಸಿದರೆ ನ್ಯಾಯ, ಸತ್ಯ ಜನಗಳಿಗೆ ದೊರಕುತ್ತದೆಯೇ? ಅವನು ಲೆಕ್ಕ ಬರೆಯಲ ಅಷ್ಟೇ. ಅವನಿಗೆ ರೆಕಾರ್ಡ್ ಬಿಲ್ಡ್ ಮಾಡುವ ಹೊಣೆಗಾರಿಕೆಯನ್ನು ಕೊಡುವುದು ಸರಿಯಲ್ಲ. ಇವತ್ತು ನೀವು ನಾಲ್ಕು ಗ್ರಾಮಗಳಿಗೆ ಒಬ್ಬ ಅಕೌಂಟೆಂಟನ್ನು ನೇಮಿಸಿದ್ದೀರಿ. ಅವರಿಗೆ ತಾವು ಕೊಟ್ಟಿರುವ ಗ್ರೇಡ್ ಆಫ್ ಪೆ ಆಕರ್ಷಕವಾಗಿಲ್ಲ. ಇಷ್ಟು ಕಡಿಮೆ ಸಂಬಳ ಬರುವವರಿಗೆ ಇಷ್ಟು ಪವರ್ಸ್ ಕೊಟ್ಟರೆ ನಿಷ್ಪಕ್ಷಪಾತವಾಗಿ ಒರಿಜಿನಲ್ ರೆಕಾರ್ಡುಗಳನ್ನು ಬಿಲ್ಡ್ ಅಪ್ ಮಾಡುತ್ತಾರೆಯೇ? ಅವರು ಒಂದು ದೋಷಕ್ಕೆ ಒಳಗಾಗದೆ ಬಿಲ್ಡ್ ಅಪ್ ಮಾಡುವುದಕ್ಕೆ ಸಾಧ್ಯವೆ ಅನ್ನುವುದನ್ನು ತಾವು ಯೋಚನೆ ಮಾಡಬೇಕು. ತಾವು ಈ ತರಹ ಅಧಿಕಾರವನ್ನು ಕೀಳು ಸಂಬಳ ತೆಗೆದುಕೊಳ್ಳುವವರಿಗೆ ಕೊಡುವುದರಿಂದ ಸ್ವಲ್ಪ ಕರಪ್ಷನ್ನಿಗೂ ತಾವೇ ಒಂದು ಉತ್ತೇಜನ ಕೊಟ್ಟಹಾಗಾಗುತ್ತದೆನ್ನುವುದನ್ನು ತಿಳಿದುಕೊಳ್ಳಬೇಕು.

ಈ ವಿಲೇಜ್ ಅಕೌಂಟೆಂಟುಗಳನ್ನು ನಾಲ್ಕೈದು ಗ್ರಾಮಗಳಿಗೆ ಮಾತ್ರ ನೇಮಿಸುತ್ತಿದ್ದೀರಿ, ಅದು ಸಾಲದು. ಎನ್. ಇ. ಎಸ್. ನಲ್ಲಿ ಸಾಮಾನ್ಯವಾಗಿ 20 ಹಳ್ಳಿಗಳನ್ನು ಸೇರಿಸಿ ಒಂದು

ಯೂನಿಟ್ ಮಾಡಿದ್ದಾರೆ ಅದರಂತೇನೆ ರೆವಿನ್ಯೂ ಹೋಬಳಿಯನ್ನು ಮಾಡಿ ಅಲ್ಲಿ ಒಂದು ಎನ್. ಇ. ಎಸ್ ಸರ್ಕಲ್ಲಿಗೆ ಒಬ್ಬ ವಿ. ಎಲ್‌. ಡಬ್ಲ್ಯು. ಇರುತ್ತಾನೆ. ಆ ತರಹ ಈ ರೆವಿನ್ಯೂ ಅಕೌಂಟೆಂಟ್ ಜುರಿಸ್‌ಡಿಕ್ಷನ್ನೂ ಮಾಡಿದರೆ ಒಳ್ಳೆಯದು. ಆದರೆ ರೆವಿನ್ಯೂ ಅಕೌಂಟೆಂಟು ಬರೀ ಲೆಕ್ಕಗಳನ್ನು ತಯಾರುಮಾಡಿಕೊಂಡು ಸರಕಾರಕ್ಕೆ ಮತ್ತು ಸರಕಾರಿ ಅಧಿಕಾರಿಗಳಿಗೆ ವಿಧೇಯನಾಗಿರಲಿ ಇನ್ನೂ ಜಾಸ್ತಿ ಹವ್ಯಾಸ ಅವನಿಗೆ ಬೇಡ. ಹೀಗೆ ಮಾಡಿ ಅವನು ನಿಷ್ಪಕ್ಷಪಾತವಾಗಿ ಇರುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಿ. ವಿ. ಎಲ್‌. ಡಬ್ಲ್ಯು. ಅನ್ನು ರಾಜಕೀಯಕ್ಕೆ ಬಿಟ್ಟುಬಿಡಿ. ಅವನನ್ನು ಏನಾದರು ಮಾಡಿಕೊಳ್ಳಿ. ಅವನಿಗೆ ಪಂಚಾಯಿತಿ ಕೆಲಸ ವಹಿಸಿ. ಈ ವಿಲೇಜ್ ಅಕೌಂಟೆಂಟನ್ನು ಪಂಚಾಯಿತಿ ಸೆಕ್ರೆಟೆರಿಯಾಗಿ ಮಾಡಿದರೆ ತುಂಬ ಅನಾಹುತವಾಗುತ್ತದೆ, ದೇಶಕ್ಕೆ ತೊಂದರೆಯಾಗುತ್ತದೆ. ಅವನಿಗೂ ಸುಖವಾಗುವುದಿಲ್ಲ, ಪ್ರಜೆಗಳಿಗೂ ಸುಖವಾಗುವುದಿಲ್ಲ. ಈ ಸಲಹೆಗೆ ತಕ್ಕ ಮಾರ್ಪಾಡನ್ನು ತಮ್ಮ ಬಿಲ್ಲಿನಲ್ಲಿ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನ್ನ ಸಲಹೆ ಮತ್ತೊಂದು ಸಾರಿ ಹೇಳಬೇಕೆಂದರೆ ರೆವಿನ್ಯೂ ಸರ್ಕಲ್ಲು ಎನ್. ಇ. ಎಸ್‌. ವಿಶಾಲತೆಗೆ ಸರಿಸಮಾನವಾಗಿರಲಿ, ಆ ಯೂನಿಟ್ಟಿನ ಇತರೆ ವ್ಯವಹಾರಗಳನ್ನು V. L. W.ಗೆ ಕೊಡಿ. V. L. W. ಕೆಲಸವಿಲ್ಲದೆ ಲಾಟರಿ ಹೊಡೆಯುತ್ತಿರುತ್ತಾನೆ, ತರಲೆಯನ್ನು ಮಾಡುತ್ತಿರುತ್ತಾನೆ, ಅವನು ನೂರಾರು ರೂಪಾಯಿ ಸಂಬಳ ತೆಗೆದುಕೊಳ್ಳುತ್ತಾನೆ ವಿಲೇಜ್ ಅಕೌಂಟೆಂಟಿಗೆ ರೆವಿನ್ಯೂ ಮ್ಯಾಟರ್ಸ್ ಮಾತ್ರ ಕೊಡಿರಿ. ಈ ಏರ್ಪಾಟಿನಿಂದ ಸರಕಾರಕ್ಕೂ ಖರ್ಚು ಕಡಿಮೆಯಾಗುತ್ತದೆ. ನನ್ನ ಸಲಹೆಯನ್ನು ತಾವು ಆಳವಾಗಿ ಆಲೋಚನೆ ಮಾಡಬೇಕು.

ಇನ್ನೊಂದು ಮುಖ್ಯವಾದ ಪ್ರಾರ್ಥನೆ ಇದೆ. ಅನೇಕ ವರ್ಷಗಳಿಂದ ವಂಶಾನುಗತವಾಗಿ ಇರುವ ವಿಲೇಜ್ ನೌಕರರುಗಳ ಹಕ್ಕುದಾರಿಕೆಯನ್ನು ರದ್ದುಪಡಿಸುವ ಒಂದು ಸನ್ನಿವೇಶ ಆಯಿತು. ತಾವು ಹೊಸಕಾನೂನನ್ನು ಕೂಡ ಈವಾಗ ತರುತ್ತಾ ಇದ್ದೀರ. ಈ ಕಾನೂನನ್ನು ತಂದ ಜ್ಞಾಪಕಾರ್ಥವಾಗಿ ದೊಡ್ಡ ಮನಸ್ಸು ಮಾಡಿ ಅವರಲ್ಲಿ ದಯೇ ತೋರಿಸಬೇಕು ತಿಳುವಳಿಕೆ ಇಲ್ಲದೆ ಈ ವಿಲೇಜ್ ಆಫೀಸರುಗಳು ಕಾನೂನು ವಿರದ್ಧ ಕೋರ್ಟಿಗೆ ಹೋದರು. ಕೋರ್ಟು ತಾವು ಮಾಡಿದ ತೀರ್ಮಾನಕ್ಕೆ ಬಂತು ಯಾವ ಒಂದು ಕಹಿವಾತಾವರಣವಿಲ್ಲದಂತೆ ಅವರು ನೆಮ್ಮದಿಯ ಮನಸ್ಸಿನಿಂದ ನಗುನಗುತ್ತಾ ಮನೆಗೆ ಹೋಗುವ ಅವಕಾಶವನ್ನು ಅವರಿಗೆ ಕಲ್ಪಿಸಿಕೊಡಬೇಕೆಂದು ಎಷ್ಟೋ ದಿವಸದಿಂದ ಕೇಳುತ್ತಾ ಇದ್ದೇನೆ. ಅವರ ನ್ಯಾಯವಾದ ಬೇಡಿಕೆಗಳನ್ನು ಕೂಲಂಕಷವಾಗಿ ವಿಮರ್ಶಿಸಿ ಏನಾದರೂ ಮಾಡಿ ಅವರಿಗೆ ಸಮಾಧಾನವಾಗುವ ರೀತಿಯಲ್ಲಿ ಅವರನ್ನು ಮನೆಗೆ ಕಳುಹಿಸಿ ಕೊಡಬೇಕು. ಅವರು ನೂರಾರು ವರ್ಷಗಳಿಂದ ದೇಶಕ್ಕೆ ಸೇವೆ ಸಲ್ಲಿಸಿರುವುದರಿಂದ ಅವರು ಆತ್ಮ ಸಂತೃಪ್ತಿಯಿಂದ ಮನೆಗೆ ಹೋದರೆ ತಮಗೂ ಒಂದು ಕೀರ್ತಿ ಬರುತ್ತದೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನೂ ಸರ್ವೆ ಇಲಾಖೆ ತೆಗೆದುಕೊಂಡರೆ ತಮ್ಮ ಕಾನೂನು ಪ್ರಕಾರ ಅದು ಒಂದು ದೊಡ್ಡ ಖಾತೆಯಾಗಿ ಬಿಟ್ಟಿದೆ. ಮೋಜಿಣಿದಾರ್‌, ಸರ್ವೆಯರುಗಳಿಂದ ಹಿಡಿದು ಸೂಪರ್‌ವೈಜರುಗಳೂ, ಅಸಿಸ್ಟೆಂಟ್ ಸೂಪರ್‌ವೈಜರುಗಳು ಹೀಗೆ ಬೇಕಾದಷ್ಟು ಕೇಡರುಗಳಿವೆ. ಸರ್ವೆಯರುಗಳಿಗೆ ತಾವು ಸಂಬಳ ಕೊಡುತ್ತಿದ್ದರೆ ರೈತರು ಸಾಮಾನ್ಯವಾಗಿ ಲೋಯರ್ ಕೇಡರಿನಲ್ಲಿರುವವರಿಗೆ ಸಾಧ್ಯವಾದ ಮಟ್ಟಿಗೆ ಕೋ-ಆಪರೇಷನ್ ಕೊಡುತ್ತಾ ಇದ್ದಾರೆ, ಆದರೆ ನಾವು ಈ ಇಲಾಖೆಯನ್ನು ಸ್ಥಾಪನೆ ಮಾಡಿರುವ ಉದ್ದೇಶವೇನು ಎಂದು ದೂರಾಲೋಚನೆ ಮಾಡಿ ನೋಡಿದಾಗ ನಾವು ಧಾರವಾಡ ಜಿಲ್ಲೆಯವರಿಗೆ ಕೃತಜ್ಞರಾಗಿರಬೇಕು. ಅವರು ನಮ್ಮ ಮೈಸೂರು ಸಂಸ್ಥಾನದಲ್ಲಿ ಮಾಡಿರತಕ್ಕಂಥ ಸರ್ವೆಯಾವುದು ಇದೆಯೋ, ಯಾವ ನಕಾಸೆ ಇದೆಯೋ, ಆಕಾರಬಂದ್ ಯಾವುದಿದೆಯೋ ಅದೇ ಇವತ್ತೂ ಕಡೆಯದಾಗಿದೆ. ಅಲ್ಲಿಂದ ಮುಂದಕ್ಕೆ ಯಾವುದೂ ಹೆಚ್ಚಾಗಿ ಆಗಿಲ್ಲ. ಈಗಿರತಕ್ಕಂಥ ಸರ್ವೆಯರುಗಳಿಗೆ ಇರುವ ಆಸಕ್ತಿಯೇ ಬೇರೆ ಭೂಮಿ ಅಳತೆ ಒಂದಿದ್ದರೆ, ಚೆಕ್ ಬುಕ್ ಮೆಜರ್‌ಮೆಂಟ್ ಬೇರೆ ಇರುತ್ತದೆ. ಸರ್ವೆ ಇಲಾಖೆ ರೆಕಾರ್ಡುಗಳಲ್ಲಿ ಜಮೀನಿನ ಎಕ್ಸ್‌ಟೆಂಟ್ ನಿಜವಾಗಿರುವುದಕ್ಕಿಂತ ಕಡಿಮೆ ಇರುತ್ತದೆ ಜಮೀನು ಎನ್‌ಕ್ರೋಚ್‌ಮೆಂಟ್ ಜಾಸ್ತಿ ಇದೆ. ಪುಸ್ತಕದಲ್ಲಿ 25 ಪರ್ಸೆಂಟಾದರು ಕಡಿಮೆ ತೋರಿಸುತ್ತಾರೆ. ಸರಿಯಾಗಿ ಲೆಕ್ಕಹಾಕಿ ಅಳತೆಮಾಡಿಸಿದರೆ ಇದರ ನಿಜಾಂಶ ಗೊತ್ತಾಗುತ್ತದೆ. ಇದರ ತನಿಖೆ ನಡೆದರೆ ಲಕ್ಷಾಂತರ ಎಕರೆ ಭೂಮಿ ಹೊರಗೆ ಬಂದು ಸರಕಾರಕ್ಕೆ ಸೇರುತ್ತದೆ. ಸರ್ವೆಯೂದ ಶರೀಕಿನಿಂದ ಸರಕಾರಕ್ಕೆ ಅಪಾರವಾಗಿಬರಬೇಕಾದ ಕಂದಾಯವೂ ಬರದೆ ಅನ್ಯಾಯವಾಗುತ್ತಿದೆ. ಅನೇಕರು ಈ ತರಹ ಎನ್‌ಕ್ರೋಚ್ ಮಾಡಿರುವುದನ್ನು ಪರೀಕ್ಷೆಮಾಡಿ, ನಾನು ತೋರಿಸಲು ಚಾಲೆಂಜ್ ತೆಗೆದುಕೊಳ್ಳುತ್ತೇನೆ.

ಅಮೇಲೆ ರೆಕಾರ್ಡ್ ವಿಷಯದಲ್ಲಿ ಏನಾಗಿದೆ ಎಂದರೆ, ದರಖಾಸ್ತುದಾರರಿಗೆ ಭೂಮಿ ಗ್ರ್ಯಾಂಟ್ ಮಾಡಿದರೆ ಸಾಮಾನ್ಯವಾಗಿ 60–70 ವರ್ಷವಾದರೂ ಅದರ ರೆಕಾರ್ಡು ಫೈನಲ್ ಆಗದೆ ಹಾಗೆಯೇ ಇದೆ. ಈ ರೆಕಾರ್ಡುಗಳು ತಹಸೀಲುದಾರರಿಂದ ಡೆಪ್ಯುಟಿ ಕಮಿಷನರ ತನಕ ಹೋಗಿ ಹಿಂದಕ್ಕೆ ಬರುತ್ತವೆ. ಅಲ್ಲಿಂದ ಸರ್ವೆ ಇಲಾಖೆಯಲ್ಲಿ ಸರ್ವೆಯರು ಸೂಪರ್‌ವೈಸರ ಡಿಸ್ಟ್ರಿಕ್ಟ್ ಸರ್ವೆ ಆಫೀಸರು ಇಷ

(ಶ್ರೀ ಎಚ್. ಆರ್. ಕೇಶವಮೂರ್ತಿ)

ರೆಲ್ಲೆಲ್ಲಾ ಒಡಾಡಿ ಪುನಃ ಹಿಂದಕ್ಕೆ ಬರುತ್ತವೆ. ಹೀಗೆ 10 ವರ್ಷದ ಮೇಲೆ ಪೆಂಡಿಂಗ್ ಇರುವ ರೆಕಾರ್ಡುಗಳು ಎಷ್ಟಿವೆ ಎಂದು ತಾವು ಹೇಳಿ ಕಳುಹಿಸಿ ಇಂಥ ಸಾವಿರಾರು ರೆಕಾರ್ಡುಗಳಿದ್ದರೂ ಈ ಇಲಾಖೆಯವರು ಮಾಡತಕ್ಕಂಥ ಕೆಲಸವೇನು ? ಒಂದು ರೆಕಾರ್ಡಿನ ವ್ಯವಹಾರ ನಡೆಸಬೇಕಾದರೆ ಅದರಲ್ಲಿ ಎಷ್ಟೊಂದು ಕಾಂಪ್ಲಿಕೇಷನ್ ಮಾಡುತ್ತಾರೆನ್ನುವುದನ್ನು ಆಲೋಚನೆಮಾಡಿ. ನಿಷ್ಕಾರಣವಾಗಿ ಜನಗಳನ್ನು ಗೋಳು ಹುಯ್ದುಕೊಳ್ಳುತ್ತಾರೆ. ಬೇರೆ ಯಾವ ಕಾರಣವೂ ಇಲ್ಲದೆ ರೆಕಾರ್ಡುಗಳು ನಡೆದುಬಿಟ್ಟು ಒಂದು ಸಣ್ಣ ಫೈಲು ದೊಡ್ಡ ಫೈಲಾಗಿ ವರ್ಷಾನುಗಟ್ಲೆ ಒಡಾಡುತ್ತಿರುತ್ತದೆ. ಇದರಿಂದ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತದೆ, ಜನಗಳಿಗೆ ಎಷ್ಟು ತೊಂದರೆಯಾಗುತ್ತದೆ, ಸರ್ಕಾರಕ್ಕೆ ಬರತಕ್ಕಂಥ ರೆವಿನ್ಯೂನಲ್ಲಿ ಎಷ್ಟು ವ್ಯತ್ಯಾಸವಾಗುತ್ತದೆ ಅಂತ ಯೋಚನೆ ಮಾಡಬೇಕು ಒಂದು ಸ್ಯಾಂಪಲ್ ಇನ್‌ಸ್ಟೆನ್ಸ್ ಕೊಡುತ್ತೇನೆ. ಒಬ್ಬ ಮನುಷ್ಯ ಒಂದು ಜಮೀನು ತೆಗೆದುಕೊಂಡು ಅದನ್ನು ಅಳತೆ ಹಾಕಿದರೆ ಅದರಲ್ಲಿ ಸಾಮಾನ್ಯವಾಗಿ ಎನ್‌ಕ್ರೋಚ್‌ಮೆಂಟಿರುತ್ತದೆ. ಎನ್‌ಕ್ರೋಚ್‌ಮೆಂಟ್ ಇದ್ದ ಪಕ್ಷದಲ್ಲಿ ಅದರ ಬಗ್ಗೆ ರೆಕಾರ್ಡ್ ಬಿಲ್ಡಪ್ ಆಗಬೇಕಾದರೆ ಜಮೀನು ಬೆಲೆಯ ಹತ್ತರಷ್ಟು ಅದಕ್ಕೆ ಖರ್ಚಾಗುತ್ತದೆ. ಆದರೂ ಜಮೀನು ಕನ್‌ಫರ್ಮ್ ಆಗಿರುವುದಿಲ್ಲ. ಸರ್ವೆಯರು ಹೇಗೆ ಅಳತೆ ಮಾಡುತ್ತಾರೋ ಏನೋ ಅವರಿಗೆ ಗೊತ್ತು. ರೆಕಾರ್ಡಿನಲ್ಲಿರುವುದಕ್ಕೂ ಜಮೀನಿರುವುದಕ್ಕೂ ಒಂದಕ್ಕೊಂದಕ್ಕೂ ತಾಳೆ ಬರುವುದಿಲ್ಲ, ಹೊಸದಾಗಿ ಈ ಕಾನೂನು ಬರುವ ಸಂದರ್ಭದಲ್ಲಿ ಲಕ್ಷಾಂತರ ಎಕರೆ ಎನ್‌ಕ್ರೋಚ್ ಆಗಿರುವ ಜಮೀನೆಷ್ಟು ರೆಕಾರ್ಡು ಕಂಪ್ಲೀಟ್ ಆಗಿ ಕನ್‌ಫರ್ಮ್ ಮಾಡಿಲ್ಲ ಫೋಡ್ ಆಗದಿರುವುದು ಎಷ್ಟು, ಇದೆಲ್ಲ ನೋಡಿ ಬಗೆಹರಿಸಬೇಕು. ತಮ್ಮ ಕಾಲದಲ್ಲಿ ಇವು ಬಗೆಹರಿಯದಿದ್ದರೆ ಇನ್ನೂ ಹತ್ತಾರು ವರ್ಷಗಳಾದರೂ ಆಗುವುದಿಲ್ಲ. ಜನಗಳಿಗೆ ತುಂಬ ತೊಂದರೆಯಾಗುತ್ತಿದೆ. ಆದ್ದರಿಂದ ಈ ವಿಷಯದಲ್ಲಿ ತಾವು ಹೆಚ್ಚು ನಿಗಾ ಕೊಟ್ಟು ರೆಕಾರ್ಡುಗಳನ್ನು ಕ್ಲೋಸ್ ಮಾಡಿಸಿಕೊಡಬೇಕು ಎಂದು ತಮ್ಮಲ್ಲಿ ನನ್ನ ಪ್ರಾರ್ಥನೆ.

Definitionನಲ್ಲಿ ಸರ್ವೆ ನಂಬರ್ ಎನ್ನುವುದಕ್ಕೆ ಹೀಗೆ ಹೇಳಿದ್ದಾರೆ :

> "Survey number" means a portion of land of which the area and assessment are separately entered, under an indictive number in the land records ;"

ಇದಕ್ಕೆಲ್ಲ original record ಯಾವುದು ಎಂದರೆ ಆಕಾರ ಬಂದ್ ಎಂದು ರೆವೆನ್ಯೂ ಇಲಾಖೆಯಲ್ಲಿರುತ್ತದೆ. ಅದರಲ್ಲಿ ವಿಸ್ತೀರ್ಣ, assessment ಎರಡೂ ಇರುತ್ತದೆ. ಇನ್ನು ಬೇರೆ ಕೆಲವು reserve lands, gomal ಇಂಥವು ಆಕಾರ ಕಂಡ ಖರಾಬು ಅಲ್ಲ. ಅವುಗಳಿಗೆ ಆಕಾರವಿರುವುದಿಲ್ಲ. ಆಕಾರವಿಲ್ಲದೇ ಇರುವುದರಿಂದ ಈ definition ಏನಿದೆ ಅದನ್ನು ಬದಲಾವಣೆ ಮಾಡಬೇಕು.

> "A portion of land of which the area is separately entered...."

ಎಂದು ಹೇಳಿದರೆ ಸಾಕು. ಇದಕ್ಕೆ ಅಸೆಸ್‌ಮೆಂಟ್ ಬೇಕಾಗುವುದಿಲ್ಲ. ಇದನ್ನು ಸ್ವಲ್ಪ ಯೋಚನೆ ಮಾಡಬೇಕು.

ಈಗ ಇರುವ ಆಕಾರ ಬಂದ್ ಎನ್ನುವುದು 50 ವರ್ಷಗಳ ಹಿಂದೆ ಮಾಡಿದ್ದು. ಅದೇ ರೀತಿಯಾಗಿ village maps ಕೂಡ 50 ವರ್ಷಗಳ ಹಿಂದೆ ಆದವು. ಇವತ್ತಿನ ದಿವಸ ರೆವಿನ್ಯೂ ಇಲಾಖೆಯವರೂ, ಸರ್ವೇ ಇಲಾಖೆಯವರೂ ಏನು ಮಾಡುತ್ತಿದ್ದಾರೆಂದರೆ ಹಿಂದಿನದನ್ನೆಲ್ಲ ಬಿಟ್ಟು index of land ಎಂದು ಹೊಸದಾಗಿ ಮಾಡುತ್ತಿದ್ದಾರೆ. ಅಲ್ಲದೆ ಹಳೆ ನಕಾಸೆ ಯಾವುದು ಇದೆ ಅದರಲ್ಲಿ ಏನೂ ಬದಲಾವಣೆ ಇಲ್ಲ ; up-to-date ಆಗಿ ಇಲ್ಲ. ಇವತ್ತು ಜನಗಳಿಗೆ ಅಂಥ ಒಂದು map ಒದಗಿಸುವುದಕ್ಕೆ ಏರ್ಪಾಡು ಮಾಡುತ್ತಿಲ್ಲ. ನಕಾಸೆಗೆ ಬದಲು ಬರೀ ಒಂದು ಪುಸ್ತಕ ಮಾಡಿ ಅಟ್ಲಾಸ್ ಎಂದು ತಹಸೀಲ್ದಾರರ ಹತ್ತಿರ ಇರುತ್ತದೆ. ಒಂದು ಸರ್ವೆ ನಂಬರ್ ಖರೀದಿಯಾದರೆ ಅದಕ್ಕೆ ಫೋಡ್ ನಂಬರ್ 1, 2, 3, ಎಂದು ಹಾಕುತ್ತಾರೆ. Village Accountant ಹತ್ತಿರ ಪಹಣಿ ಲೆಕ್ಕ ವಗೈರೆ ಇರುತ್ತದೆ. ಅವನ ಹತ್ತಿರ ಅಟ್ಲಾಸ್ ಪುಸ್ತಕ ಕೊಟ್ಟಿರುವುದಿಲ್ಲ. ಒಂದನೇ ಫೋಡ್, ಎರಡನೇ ಫೋಡ್ ಇತ್ಯಾದಿ ಏನು ಎಂಬುದು ಅವನಿಗೆ ಗೊತ್ತಿರುವುದೇ ಇಲ್ಲ. ಕಷ್ಟಪಟ್ಟು ನೋಡುವವರು ನೋಡುತ್ತಾರೆ. ಸಾಮಾನ್ಯವಾಗಿ ಅಂದಾಜಿನ ಮೇಲೆ ಲೆಕ್ಕ ಬರೆಯುತ್ತಾನೆ. ಪಹಣಿ ಎಲ್ಲ ಸುಳ್ಳಿನ ಕಂತೆ ಎಂದು ಹೇಳಬಹುದು. ಹೀಗೆ ಲೆಕ್ಕ ತಯಾರ್ಮಾಡುತ್ತಾರೆ. ಅದರಂತೆ ಜಮಾಬಂದಿ ನಡೆಯುತ್ತದೆ. ಅಧಿಕಾರಿಗಳೂ ಅದಕ್ಕೆ ರುಜು ಹಾಕುತ್ತಾರೆ. ಇದಕ್ಕೆ ಪ್ರತಿಯಾಗಿ ನಾನು ಅರಿಕೆ ಮಾಡಿಕೊಳ್ಳುವುದು ಇಷ್ಟೆ. ಅಟ್ಲಾಸ್ ಪುಸ್ತಕವನ್ನು ಸರ್ವೆ ಇಲಾಖೆಯವರು ಮಾಡುತ್ತಾರೆ. ಸರ್ವೆ ನಂಬರನ್ನೂ ಫೋಡ್ ಮಾಡುತ್ತಾರೆ. ಜಮೀನುಗಳನ್ನು ಭಾಗಭಾಗವಾಗಿ ಕ್ರಯಕ್ಕೆ

ಬರೆದು ರಿಜಿಸ್ಟರ್ ಮಾಡಿಸಿ ಕೊನೆಗೆ ಜಾಗವೇ ಇಲ್ಲದ ಹಾಗೆ ಮಾಡಿದ್ದಾರೆ. ಜನರಿಗೆ ಬೇಕಾದ ವಿವರಗಳು ಸರಿಯಾಗಿ ಸಿಕ್ಕದೆ ತೊಂದರೆಯಾಗಿದೆ. Record of rights ಕಾಪಿ ತೆಗೆದುಕೊಳ್ಳು ವುದಕ್ಕೆ ಹೋದರೆ...

Mr. SPEAKER.—It is to safeguard against that, that this Revenue Bill has been brought in.

Sri H. R. KESHAVA MURTHY.—There is no section here to eliminate such a clause.

ಆಕಾರ ಬಂದ್ ರಿಜಿಸ್ಟರನ್ನೂ maintain ಮಾಡಲು ಈ ಕಾನೂನಿನಲ್ಲಿ provision ಇಲ್ಲ. ಇದು ರೈತರ ದೃಷ್ಟಿಯಿಂದ ಬಹಳ vital point. ಸರ್ವೆ ನಂಬರುಗಳೂ, ಸಬ್ ನಂಬರುಗಳೂ ರೈತನಿಗೆ ಕೂಡ ಚೆನ್ನಾಗಿ ಗೊತ್ತಾಗಬೇಕು. ಸಾಮಾನ್ಯವಾಗಿ ಸಬ್ ನಂಬರುಗಳಿಗೆ ಬಾಂದ್ ಕಲ್ಲುಗಳಿಲ್ಲ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಸರ್ವೆ ಇಲಾಖೆಯವರು ಬಂದು ಅಳತೆಮಾಡಿಕೊಂಡು ಅಟ್ಲಾಸ್ ಪುಸ್ತಕದಲ್ಲಿ ಒಂದು ಲೈನ್ ಹಾಕಿಕೊಂಡು ಹೋಗುತ್ತಾರೆ. ಪ್ರತಿಯೊಂದು ಸಬ್ ನಂಬರಿಗೂ ಬಾಂದ್ ಕಲ್ಲುಗಳನ್ನು ಹಾಕುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಕಾನೂನಿನಲ್ಲಿ ಇಂಥದನ್ನು ಮಾಡಬೇಕೆಂದು ಅಳವಡಿಸಬೇಕು. ಆವಾಗ ಬಡರೈತರಿಗೆ, ಅತ್ಯಂತ ಕಡಮೆ ಹಿಡುವಳಿ ಇರತಕ್ಕ ರೈತರಿಗೆ ಬಹಳ ಅನುಕೂಲವಾಗುತ್ತದೆ. ಅದಕ್ಕೆ ತಕ್ಕಂತೆ ಕಾನೂನಿನಲ್ಲಿ ಅವಕಾಶವನ್ನು ಕಲ್ಪಿಸಬೇಕು.

ಅಟ್ಲಾಸ್ ಬುಕ್ ಬಹಳ ಮುಖ್ಯವಾದ ರಿಕಾರ್ಡ್. ಇದನ್ನು up-to-date maintain ಮಾಡಬೇಕು. ಒಬ್ಬ ರೈತನಿಗೆ ಒಂದು ಜಮೀನು ಕ್ರಯವಾದರೆ, ಅಟ್ಲಾಸ್ ಪುಸ್ತಕದಲ್ಲಿ ಸಾಧ್ಯವಾದಷ್ಟು ಜಾಗ್ರತೆ ಅದಕ್ಕೆ ಸಂಬಂಧಪಟ್ಟ entry ಆಗಬೇಕು. ಆ ರೀತಿ entry ಆದರೆ ಅದರಂತೆ ಜಮೀನಿನಲ್ಲಿ ಹದ್ದುಬಸ್ತು ತೋರಿಸಲು ಕಲ್ಲು ಇರಬೇಕು. ಇದಕ್ಕೂ ಏರ್ಪಾಡು ಮಾಡಬೇಕು.

ಸಾಮಾನ್ಯವಾಗಿ ಕೆಲವು ಜಮೀನನ್ನು ದರಖಾಸ್ತಿನಲ್ಲಿ ಕೊಡುತ್ತಾರೆ. ಹಾಗೆ ದರಖಾಸ್ತಿನಲ್ಲಿ ಕೊಟ್ಟರೆ ರೆವೆನ್ಯೂ ಇಲಾಖೆಯವರು ಸರ್ವೆ ಇಲಾಖೆಗೆ ರಿಕಾರ್ಡು ಕಳಿಸುತ್ತಾರೆ. ಸರ್ವೆ ಇಲಾಖೆಯವರು ಅಂಥ ಜಮೀನನ್ನು ಪೋಡ್ ಮಾಡಿ ಹದ್ದುಬಸ್ತು ಗೊತ್ತುಮಾಡುವುದಕ್ಕೆ ವರ್ಷಗಳು ತೆಗೆದುಕೊಳ್ಳುತ್ತಾರೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಜಮೀನು ಒತ್ತುವರಿ ಮಾಡಿಕೊಳ್ಳಲು ಇದೇ ಮೂಲ ಕಾರಣ. ಯಾವಾಗ ಜಮೀನನ್ನು ಕೊಡಬೇಕಾದರೂ ಕೂಡ ಬೌಂಡರಿ ಮೊದಲು ನಿರ್ಧರಿಸಿ ಆಮೇಲೆ ಕೊಡಬೇಕು. ಈ ಕಾವಲು ಮತ್ತು ಜಮೀನನ್ನು ಹಂಚುವಾಗ ಬೌಂಡರಿಯನ್ನು ಮೊದಲು ನಿರ್ಧರಿಸಿ ಕಲ್ಲುಗಳನ್ನು ನೆಟ್ಟು ಆಮೇಲೆ ಜಮೀನನ್ನು ಕೊಡಿ. ಆಗ ಯಾರೂ ಜಮೀನನ್ನು ಒತ್ತುವರಿ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಜಮೀನನ್ನು ಕೊಡುವಾಗ ಬೌಂಡರಿ ಕಲ್ಲುಗಳ ಪ್ರಕಾರ ಅಳತೆಮಾಡಿ ಇಷ್ಟು ಎಕರೆ ಜಮೀನಿದೆ ಎಂದು ನಿರ್ಧರಿಸಿ ರಿಕಾರ್ಡಿನಲ್ಲಿ ಅದನ್ನೂ ನಮೂದಿಸಿ ಕೊಡುವುದರಿಂದ ರೈತರಿಗೂ ಅನುಕೂಲವಾಗುತ್ತದೆ. ಇದಕ್ಕೂ ಸಹ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಕ್ಲಾಜ್ 39ರಲ್ಲಿ manner of evicting any person wrongfully in possession of land ವಿಚಾರ ಹೇಳಿದ್ದಾರೆ. ಈ ಬಗ್ಗೆ ನಾನು ಹೇಳುವುದೇನೆಂದರೆ ಜಮೀನನ್ನು ಕೊಡುವಾಗ ಬೌಂಡರಿ ನಿರ್ಧರಿಸಿಕೊಟ್ಟರೆ encroachment question, eviction question ಬರುವುದಿಲ್ಲ. ಆದ್ದರಿಂದ ಮೊದಲು ಬೌಂಡರಿ ನಿರ್ಧರಿಸಿ ಆಮೇಲೆ ಜಮೀನು ಕೊಡುವಂತೆ ಕಡ್ಡಾಯ ಮಾಡಬೇಕು. ಆಮೇಲೆ ಯಾರಾದರೂ encroach ಮಾಡಿಕೊಂಡಿದ್ದರೆ ಹಾಗೆ ಎಷ್ಟು ಜನ ಎಷ್ಟು ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆಂಬುದಕ್ಕೆ ಸರ್ವೆ ನಡೆಸಿ ಒತ್ತುವರಿ ಮಾಡಿಕೊಂಡಿರುವ ಜಮೀನಿಗೆ back assessment ಹಾಕಿ, ಅದಕ್ಕೆ upset price ವಸೂಲ್ಮಾಡಿ ಅವರವರಿಗೇ confirm ಮಾಡಬೇಕು. ಇದು ನನ್ನ ಸಲಹೆ. ಹಾಗಿಲ್ಲದೆಹೋದರೆ ರೈತರಿಗೆ ಖಂಡಿತ ತೊಂದರೆ ಮಾಡುತ್ತೀರಿ. ತಿಳುವಳಿಕೆ ಇಲ್ಲದ ರೈತರಿಗೆ ರೆವೆನ್ಯೂ ಮತ್ತು ಸರ್ವೆ ಇಲಾಖೆಯವರು ಕಿರುಕುಳ ಕೊಡುತ್ತಾರೆ. ಆದುದರಿಂದ ಒತ್ತುವರಿ ಮಾಡಿಕೊಂಡಿರುವ ಜಮೀನಿನ upset value ಮತ್ತು back assessment ತೆಗೆದುಕೊಂಡು ಅವರವರಿಗೇ ಆ ಭೂಮಿಯನ್ನು confirm ಮಾಡವುದಕ್ಕೆ ಅನುಕೂಲವಾಗುವಂತೆ ಈ ಕ್ಲಾಜಿನಲ್ಲಿ ಅಳವಡಿಸಬೇಕು ಎಂದು ಹೇಳುತ್ತೇನೆ. ಇದರಲ್ಲಿ ತಾಲ್ಲೂಕು ಒಂದು ಯುನಿಟ್ ಎಂದಿದೆ. ಆದರೆ ಒಂದು ಸರ್ಕಲ್, ಒಂದು ಹೋಬಳಿ ಕೂಡ ಬೇಕಾಗುತ್ತದೆ. ಆದುದರಿಂದ ಇದನ್ನು ಸೇರಿಸಬೇಕೆಂದು ನನ್ನ ಸಲಹೆ.

ಇನ್ನು ಡಿವಿಜನಲ್ ಕಮಿಷನರ್, ಡೆಪ್ಯುಟಿ ಕಮಿಷನರ್, ಸ್ಪೆಷಲ್ ಡೆಪ್ಯುಟಿ ಕಮಿಷನರ್, ಸ್ಪೆಷಲ್ ಆಡಿಷನಲ್ ಡೆಪ್ಯುಟಿ ಕಮಿಷನರ್ ಎಂದು ಇದರಲ್ಲಿ ಹೇಳಿದ್ದೀರಿ. ಕ್ಲಾಜ್ 9(2) ನಲ್ಲಿ ಹೇಳಿರುವ ಈ ಸ್ಪೆಷಲ್ ಅಡಿಷನಲ್ ಡೆಪ್ಯೂಟಿ ಕಮಿಷನರ್ ಯಾರು? ಇದನ್ನು ತಿಳಿಸಬೇಕು ಎಂಬುದು ಇಷ್ಟೇ ನನ್ನ ಸಲಹೆ.

(ಶ್ರೀ ಎಚ್. ಆರ್. ಕೇಶವಮೂರ್ತಿ)

ಇನ್ನು ಕ್ಲಾಜ್ 23(3) ನಲ್ಲಿ ಯಾರು ತಪ್ಪು ಮಾಡುತ್ತಾರೆಯೋ ಅವರಿಗೆ ಆರು ತಿಂಗಳುಗಳ ವರೆಗೆ ಶಿಕ್ಷೆ ವಿಧಿಸಬೇಕೆಂದು ಇದೆ. ಆದರೆ ಯಾರು ಬಚ್ಚಿಟ್ಟುಕೊಂಡಿರುತ್ತಾರೆಯೋ ಅಂಥವರಿಗೆ ಶಿಕ್ಷೆ ವಿಧಿಸಲು ಅವಕಾಶವಿಲ್ಲ. ಕ್ಲಾಜ್ 23(1) ಪ್ರಕಾರ ಮಾತ್ರ ಶಿಕ್ಷೆ ಮಾಡಲು ಅವಕಾಶವಿದೆ. ಆದರೆ ಇಂಥವರಿಗೂ ಶಿಕ್ಷೆ ಮಾಡಲು ಅವಕಾಶ ಇರಬೇಕು ಎಂದು ನನ್ನ ಸಲಹೆ.

ಇನ್ನು ರೆವೆನ್ಯೂ ಕೋರ್ಟ್ ವಿಷಯದಲ್ಲಿ ತಹಶೀಲದಾರ್ ಹಾಗು ಅಸಿಸ್ಟೆಂಟ್ ಕಮಿಷನರ್ ಹೀಗೆ ಎರಡು ಅಪೆಲೇಟ್ ಅಥಾರಿಟಿ ಮಾಡಿ ಎರಡು ಅಪೀಲ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇದು ಏನಾಗುತ್ತದೆ ಎಂದರೆ ಸಾಮಾನ್ಯವಾಗಿ ಬಡ ಜನರಿಗೆ ಇದರಿಂದ ತೊಂದರೆಯಾಗುತ್ತದೆ. ಎರಡನೇ ಅಪೀಲು ಫೈನಲ್ ಆದರೆ ತುಂಬಾ ಜನರಿಗೆ ಅನ್ಯಾಯವಾಗುತ್ತದೆ. ಯಾಕೆಂದರೆ ಅಸಿಸ್ಟೆಂಟ್ ಕಮಿಷನರರು ಲೋಕಲ್ ಲೀಡರ್ಸ್ ಪ್ರಭಾವಕ್ಕೆ ಒಳಗಾಗಿರುತ್ತಾರೆ. ನಿಷ್ಪಕ್ಷಪಾತ ನ್ಯಾಯ ದೊರಕುವುದಿಲ್ಲ. ನಿಷ್ಪಕ್ಷಪಾತ ನ್ಯಾಯ ಸರಕಾರದ ಮಟ್ಟದಲ್ಲಿ ದೊರೆಯುತ್ತದೆ. ಅದಕ್ಕೂ ಕೆಳಗಿನ ಮಟ್ಟದಲ್ಲಿ ದೊರಕುವುದು ಸಾಧ್ಯವಿಲ್ಲ. ಎರಡು ಚಾನ್ಸ್ ಅಷ್ಟೇ ಕೊಡುವುದಾದರೆ ಡಿವಿಜನಲ್ ಕಮಿಷನರ್ ಮಟ್ಟಕ್ಕಾದರೂ ಅಪೀಲು ಮಾಡುವುದನ್ನು ಕೊಡಬೇಕು ಇಲ್ಲವೆ ಸರಕಾರದ ಮಟ್ಟಕ್ಕಾದರೂ ತರಬೇಕು. ಫೈನಲ್ ಅಥಾರಿಟಿ ಸರಕಾರಕ್ಕೆ ಇರಬೇಕೆಂದು ನನ್ನ ಸಲಹೆ.

6-00 P.M.

ಆಮೇಲೆ ಹುದ್ದೆಗಳ ವಿಷಯ. ಅಸಿಸ್ಟೆಂಟ್ ಕಮಿಷನರ್ ನೇಮಕ ವಿಚಾರದಲ್ಲಿ ಈ ಹುದ್ದೆ ಅನಾವಶ್ಯಕ ಎಂದು ಅಬ್ಜೆಕ್ಷನ್ಸ್ ಬರುತ್ತಿವೆ. ತಾಲ್ಲೂಕು ಮಟ್ಟದಲ್ಲಿ ಎನ್.ಇ.ಎಸ್. ಬಂದ ಮೇಲೆ ಬಿ.ಡಿ.ಒ. ಅವರು ಕೆಲಸ ನಿರ್ವಹಿಸುತ್ತಿದ್ದಾರೆ. ತಹಶೀಲ್‌ದಾರರಿಗೆ ಅಷ್ಟು ಹೆಚ್ಚು ಕೆಲಸ ಈಗ ಇಲ್ಲ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಡೆಪ್ಯೂಟಿ ಕಮಿಷನರ್, ಸ್ಪೆಷಲ್ ಡೆಪ್ಯೂಟಿ ಕಮಿಷನರ್, ಸ್ಪೆಷಲ್ ಅಡಿಷನಲ್ ಡೆಪ್ಯೂಟಿ ಕಮಿಷನರ್ ಇವರಿಗೆ ಏನೇನು ಕೆಲಸ ಇದೆ ಪರಿಶೀಲನೆ ಮಾಡಬೇಕಾದುದು ಅಗತ್ಯವಾಗಿದೆ. ಯಾಕೆಂದರೆ ಕೆಲಸ ಡೂಪ್ಲಿಕೇಷನ್ ಆಗುತ್ತಾ ಇದೆ. ಕೆಲಸ ಡೂಪ್ಲಿಕೇಷನ್ ಆಗಿ ಪುನಃ ಅದೇ ಕೆಲಸ ಮಾಡುವುದಕ್ಕೆ ಅವಕಾಶ ಕೊಡುವುದು ಸರಿಯಲ್ಲ. ಜಮೀನು ಹಂಚುವುದು, ತಗಾಯಿ ಸಾಲ ಕೊಡುವುದು, ಏಲಿಯನೇಷನ್, ರಿಕಾರ್ಡ್ ತಯಾರು ಮಾಡುವುದು ಇವುಗಳನ್ನು ಒಬ್ಬರು ಒಂದು ಕೆಲಸ ಮಾಡಲಿ. ಒಟ್ಟಿನಲ್ಲಿ ತಹಶೀಲದಾರರಿಗೆ ಡೂಪ್ಲಿಕೇಷನ್ ಆಫ್ ವರ್ಕ್ ಇಲ್ಲದ ಹಾಗೆ ಕೆಲಸ ಕೊಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಕೆಲವು ಅಧಿಕಾರಗಳ ವಿಷಯದಲ್ಲಿ ಡಿವಿಜನಲ್ ಕಮಿಷನರಿಗೂ ಡೆಪ್ಯೂಟಿ ಕಮಿಷನರಿಗೂ ವ್ಯತ್ಯಾಸವಿಲ್ಲದ ಹಾಗೆ ಮಾಡಿದ್ದಾರೆ, ಡೆಪ್ಯೂಟಿ ಕಮಿಷನರ್ ಆರ್ಡರ್ ಮೇಲೆ ಅಪೀಲು ಮಾಡಬೇಕಾದರೆ ಟ್ರಿಬ್ಯೂನಲ್‌ಗೆ ಬರಬೇಕು, ಎಂದು ಹೇಳಿದ್ದಾರೆ, ಹಾಗಾದರೆ ಡಿವಿಜನಲ್ ಕಮಿಷನರು ಏಕೆ ಇರಬೇಕು? ಡಿವಿಜನಲ್ ಕಮಿಷನರ ಅಧಿಕಾರವೂ ಒಂದೇ ಡೆಪ್ಯೂಟಿ ಕಮಿಷನರ ಅಧಿಕಾರವೂ ಒಂದೇ ಎಂದರೆ ಅದು ಸರಿಬರುವುದಿಲ್ಲ. ಡೆಪ್ಯೂಟಿ ಕಮಿಷನರ ಮೇಲೆ ಡಿವಿಜನಲ್ ಕಮಿಷನರು ಇರುವಾಗ ಡೆಪ್ಯೂಟಿ ಕಮಿಷನರ ಆರ್ಡರನ್ನು ಸ್ಟೇ ಮಾಡುವುದಕ್ಕೆ ಡಿವಿಜನಲ್ ಕಮಿಷನರಿಗೆ ಅಧಿಕಾರ ಇಲ್ಲದೇ ಇದ್ದರೆ ಅವರು ತಮ್ಮ ಆಡಳಿತವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದಕ್ಕೆ ಅವಕಾಶವಿರುವುದಿಲ್ಲ. ಅಥವಾ ಆಡಳಿತವನ್ನು ದಕ್ಷತೆಯಿಂದ ನಿರ್ವಹಿಸುವುದಕ್ಕೆ ಸಾಧ್ಯವಿಲ್ಲ. ಡೆಪ್ಯೂಟಿ ಕಮಿಷನರ ಆರ್ಡರ್ ಮೇಲೆ ಡಿವಿಜನಲ್ ಕಮಿಷನರಿಗೆ ಒಂದು ಅಪೀಲು ಮಾಡತಕ್ಕ ಅವಕಾಶ ಇದ್ದೇ ಇರಬೇಕು, ಹಾಗೆ ಇಲ್ಲದೇ ಇದ್ದರೆ There will be no difference between the Divisional Commissioner and the Deputy Commissioner. ಕಂಟ್ರೋಲ ಇದ್ದಾಗಲೇ ಡಿವಿಜನಲ್ ಕಮಿಷನರ ಆಡಳಿತ ಬಿಕ್ಕಟ್ಟಾಗಿ ನಡೆಯುವುದಕ್ಕೆ ಅವಕಾಶವಿರುತ್ತದೆ ಡಿವಿಜನಲ್ ಕಮಿಷನರು ಡೆಪ್ಯೂಟಿ ಕಮಿಷನರುಗಳ ಮೇಲೆ ಸರಿಯಾದ ಹತೋಟಿಯನ್ನು ಇಡುವುದಕ್ಕೂ ಅವಕಾಶವಿರುತ್ತದೆ.

Mr. SPEAKER.—The House now stands adjourned and will mee to-morrow at 9 a.m.

The House adjourned at Five Minutes past Six of the Clock to mee again at Nine of the Clock on Tuesday, the 24th December 1963.